# ಅಧ್ಯಯನ – 10 Study X

# ಸ್ವಸ್ಥ ಮನಸ್ಸಿನ ಆತ್ಮ

## The Spirit of a Sound Mind

**ಕರ್ತನ ಜನರಲ್ಲಿರುವ ದೇವರ ಆತ್ಮವು ಭಯದ ಆತ್ಮವನ್ನು ಹೊಡೆದೋಡಿಸುತ್ತದೆ – ಮಾನವ ಜಾತಿಯು ಸಾಮಾನ್ಯವಾಗಿ ಮಾನಸಿಕವಾಗಿಯೂ, ದೈಹಿಕವಾಗಿಯೂ ದೃಢವಾಗಿರುವುದಿಲ್ಲ – ಪವಿತ್ರಾತ್ಮನು ಯಾವ ಅರ್ಥದಲ್ಲಿ ಸ್ವಸ್ಥ ಮನಸ್ಸಿನ ಆತ್ಮನಾಗಿರುತ್ತಾನೆಂಬುದರ ತಿಳುವಳಿಕೆ – ಈ ಫಲಿತಾಂಶವನ್ನು ಉತ್ಪತ್ತಿಮಾಡುವ ಕಾರ್ಯಾಚರಣೆ – ಸ್ವಸ್ಥ ಮನಸ್ಸಿನ ನಿದರ್ಶನಗಳು . . . .**

**"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ, ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ" (1 ತಿಮೋ. 1:7)**

ಭಾಷೆಯ ಎಲ್ಲಾ ನಿಯಮಗಳ ಪ್ರಕಾರ, ಹೇಡಿತನದ ಆತ್ಮವನ್ನು ಮತ್ತೊಂದು ಆತ್ಮಕ್ಕೆ ವಿರೋಧವಾಗಿ ಇಲ್ಲಿ ಇಡಲಾಗಿದೆ. ಪ್ರೀತಿಯ, ಶಕ್ತಿಯ. ಸ್ವಸ್ಥಮನಸ್ಸಿನ ಆತ್ಮವು ಒಂದು ವ್ಯಕ್ತಿಯಾಗಲೀ, ಮೂರು ವ್ಯಕ್ತಿಗಳಾಗಲೀ ಆಗುವುದಾದರೆ, ಭಯದ ಆತ್ಮವನ್ನು ಸಹಾ ಒಂದು ವ್ಯಕ್ತಿಯಾಗಿ ಪರಿಗಣಿಸಬೇಕಾಗುತ್ತದೆ. ಅಂಥಾಃ ವ್ಯವಸ್ಥೆಯ ತಪ್ಪು ಭ್ರಮೆಯ ವಾದಕ್ಕೆ ಕೇವಲ ನಿರಾಧಾರವೆಂಬುದಕ್ಕಿಂತ ಹೆಚ್ಚಿನ ಹೇಳಿಕೆಯ ಅಗತ್ಯವಿಲ್ಲ.

ಕರ್ತನ ಜನರು ಪವಿತ್ರಾತ್ಮ ಅಥವಾ ಪವಿತ್ರ ಪ್ರಭಾವ ಭರಿತರಾಗಿರುವ ಅನುಪಾತಕ್ಕೆ ಅನುಗುಣವಾಗಿ ಮತ್ತು ಅವುಗಳಿಂದ ಹೆಚ್ಚು ಹೆಚ್ಚಾಗಿ ವಿಕಸಿತರಾಗುವಷ್ಟಕ್ಕೆ, ವಿಸ್ತಾರಗೊಳ್ಳುವಂತೆಯೇ ಅವರಲ್ಲಿ ಹೇಡಿತನದ ಆತ್ಮವು ಸಹಾ ಕ್ಷೀಣಿಸುತ್ತಾ ಬರುತ್ತದೆ. ಕ್ರೈಸ್ತರಲ್ಲಿರುವ ಹೇಡಿತನದ ಆತ್ಮನೆಂದರೆ ಅನುಮಾನದ ಆತ್ಮ. ಇದು ವಿಶ್ವಾಸದ ಕೊರತೆಯ, ಪವಿತ್ರಾತ್ಮನ ಕೊರತೆಯ ಗುರುತಾಗಿದೆ. ಹೇಡಿತನದ ಆತ್ಮವು ಆತ್ಮೀಕ ಸಂಗತಿಗಳಲ್ಲಿ, ಕ್ರೈಸ್ತ ಬೆಳವಣಿಗೆಯ ಎಲ್ಲಾ ಲಕ್ಷಣಗಳಲ್ಲಿನ ವ್ಯಕ್ತಿಗತವಾಗಿಯೂ, ಸಭೆಯಾಗಿಯೂ ಕಂಡುಬರುವ ಫಲದಾಯಕವಾದ ಕೆಟ್ಟತನದ ಮೂಲವಾಗಿದೆ; ಇದು ದೈಹಿಕ ಬಲಹೀನತೆಗಳಲ್ಲಿ, ದೌರ್ಬಲ್ಯಗಳಲ್ಲಿ ತನ್ನನ್ನು ಗುರುತಿಸುಕೊಳ್ಳುತ್ತದೆ. ಪವಿತ್ರಾತ್ಮ ಭರಿತನಾದ ದೇವರ ಮಗುವನ್ನು ಆತನ ಸ್ವಂತ ಪ್ರಾಕೃತಿಕ ಸ್ವಭಾವಕ್ಕೆ ಹೋಲಿಸುವಾಗ ಆತನು ದೈತ್ಯನು. ಯಾಕೆಂದರೆ ಆತನ ಅಂಜಿಕೆಗಳು ತುಳಿದುಹಾಕಲ್ಪಟ್ಟಿವೆ, ಆತನ ಹೃದಯವು ಸ್ಥಾಪಿತಗೊಂಡಿದೆ, ಆತನ ವಿಶ್ವಾಸವು ಬೇರು ಬಿಟ್ಟಿದೆ, ತಳವೂರಿದೆ ಮತ್ತು ಆತನ ಆತ್ಮವು ಪರದೆಯೊಳಗೆ ಲಂಗರು ಹಾಕಲ್ಪಟ್ಟು ಭದ್ರವಾಗಿದೆ. ಹೀಗಾಗಿ ತೊಂದರೆಯೆಂಬ ಬಿರುಗಾಳಿಯು ಬೀಸುವಾಗ, ಆತನು ವಿಪತ್ತಿನ ಬಂಡೆಗೆ ಅಪ್ಪಳಿಸದಂತೆ ತಡೆ ಹಿಡಿಯಲ್ಪಟ್ಟಿದ್ದಾನೆ. ಈ ರೀತಿಯಲ್ಲಿ ಪವಿತ್ರಾತ್ಮವನ್ನು ಹೊಂದಿದವರಿಗೆ ಶಕ್ತಿಯಾಗಿದೆ ಮತ್ತು ಶತ್ರುಗಳಿಗೆ ಇದು ಆಗಾಗ್ಗೆ ವಿಸ್ಮಯನ್ನುಂಟು ಮಾಡುವುದಾಗಿದೆ.

ಕ್ರಿಸ್ತನ ಸುವಾರ್ತೆಯು ದೃಢಮನಸ್ಕರನ್ನು, ದೃಢ ದೇಹಿಗಳನ್ನು ಮಾತ್ರವೇ ಹಿಡುಕೊಳ್ಳುತ್ತದೆ ಆದುದರಿಂದ ಆತನವರು ಬಲಶಾಲಿಗಳಾಗಿದ್ದಾರೆ ಎಂದು ನಾವು ಸಾಧಿಸುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ನಿಜವಾಗಿಯೂ ಮತ್ತು ದೇವರ ವಾಕ್ಯದ ಸಾಕ್ಷಿಗಳಿಂದ ಕ್ರಿಸ್ತನ ಸುವಾರ್ತೆಯು ಸಾಮಾನ್ಯವಾಗಿ ಬಲಹೀನರನ್ನು, ತಮ್ಮ ಬಲಹೀನತೆಗಳನ್ನು ಬಲ್ಲವರನ್ನು, ತಮಗೆ ಅಗತ್ಯವಾಗಿರುವ ಸಹಾಯದ ಬಗ್ಗೆ ಬಲಶಾಲಿಗಳಿಗಿಂತ ಹೆಚ್ಚಾಗಿ ಗ್ರಹಿಸುವವರಾಗಿದ್ದಾರೆ. ಆದಾಗ್ಯೂ, ಪವಿತ್ರಾತ್ಮನನ್ನು ಸ್ವೀಕರಿಸುವವರಿಗೆ ಅವರ ಬಲಹೀನತೆಗಳಲ್ಲಿ ಬಲಹೊಂದಿಕೊಳ್ಳುವಂತೆ ಅಂಥಾಃ ಪರಿವರ್ತನೆಯ ಪ್ರಭಾವವುಂಟಾಗುತ್ತದೆ. ಈ ಲೋಕದ ಬಲಹೀನ ಸಂಗತಿಗಳು ದೇವರ ಮೂಲಕ (ಆತ್ಮನ ಮೂಲಕ, ದೇವರ ಶಕ್ತಿಯ ಮೂಲಕ) ತಪ್ಪು ಅಪರಾಧಗಳ, ಪಾಪದ ಪ್ರಭಲತೆಯನ್ನು ಕೆಡವಿಹಾಕುವಷ್ಟರ ಮಟ್ಟಿಗೆ, ಬಲಹೊಂದಿಕೊಳ್ಳುತ್ತವೆ ಮತ್ತು ಬಲಹೀನರು ಕರ್ತನಾದ ಯೇಸುವಿನ ಒಳ್ಳೆಯ ಯೋಧರಂತೆ ಉತ್ತಮವಾಗಿ ಹೋರಾಡಲು ಶಕ್ತರನ್ನಾಗಿ ಮಾಡುತ್ತದೆ. ಇದು ಸ್ವಾಭಾವಿಕವಾಗಿ ಅವರಿಗಿಂಥ ವರಿಷ್ಠರಿಗೆ ಆಶ್ಚರ್ಯ ವನ್ನುಂಟು ಮಾಡುತ್ತದೆ – 1 ಕೊರಿಂಥ 1:27; 2 ಕೊರಿಂಥ 10:4; 2 ತಿಮೋ. 2:3.4.

ಹಿಂದಿನ ಕಾಲಗಳಲ್ಲಿ ಬಲಶಾಲಿಗಳೂ ತತ್ತರಿಸುತ್ತಿದ್ದ ಕಷ್ಟಸಂಕಟಗಳನ್ನು ಈ ಬಲಹೀನರು ಕ್ರಿಸ್ತನ ನಿಮಿತ್ತ, ತಮ್ಮ ಜೀವಾಂತ್ಯದವರೆಗೂ ಭದ್ರವಾಗಿದ್ದು ಸಹಿಸುತ್ತಾ ರಕ್ತಸಾಕ್ಷಿಗಳಾದರು. ಇಂದು ಹಿಂಸೆಯ ರೀತಿಯಲ್ಲಿ ಬಹಳವಾಗಿ ಬದಲಾಗಿದ್ದರೂ ಆ ವರ್ಗದವರಿಗೆ ಇದು ಈಗಲೂ ಸತ್ಯವಾಗಿದೆ. ಒಳ್ಳೆಯ ಸೈನಿಕರಂತೆ ಕಷ್ಟವನ್ನು ಸಹಿಸಿಕೊಳ್ಳುವುದು ಮತ್ತು ತಮ್ಮ ಸಹೋದರರುಗಳಿಗಾಗಿ ಪ್ರಾಣವನ್ನು ಅರ್ಪಿಸುವುದು ಇಂದಿಗೂ ಅಗತ್ಯವಾಗಿದೆ; ಈ ಲೋಕದ ಬಲಹೀನ ಸಂಗತಿಗಳು, ಹೌದು, ದೇವರು ಆರಿಸಿಕೊಂಡ ನಿರ್ಲಕ್ಷಿತರು ಇನ್ನೂ ಸಹಾ ಈ ಲೋಕದ ಬುದ್ಧಿಶಾಲಿಗಳನ್ನು ಮತ್ತು ಶಕ್ತಿವಂತರನ್ನು

ಗೊಂದಲಕ್ಕೀಡುಮಾಡುತ್ತಿದ್ದಾರೆ – **"ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವುದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಟರನ್ನು ನಾಚಿಕೆಪಡಿಸುವುದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವರನ್ನೂ ಆರಿಸಿಕೊಂಡಿದ್ದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವುದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ"** – 1 ಕೊರಿಂಥ 1:27–28.

ನಮ್ಮಲ್ಲಿರುವ ಈ ದೇವರ ಆತ್ಮನು ಶಕ್ತಿಯ ಆತ್ಮ ಮಾತ್ರವಲ್ಲದೆ ಆದರೆ ಪ್ರೀತಿಯ ಆತ್ಮವೂ ಆಗಿದೆ ಎಂಬುದಾಗಿ ಅಪೋಸ್ತಲನು ಹೇಳುವವನಾಗಿದ್ದಾನೆ. ಇಲ್ಲಿ ಹೇಳಲ್ಪಟ್ಟ ಪ್ರೀತಿಯು ಎಲ್ಲಾ ಮಾನವರಲ್ಲಿಯೂ ಸ್ವಾಭಾವಿಕವಾಗಿರುವ ಮತ್ತು ಕೆಳಸೃಷ್ಠಿಗಳಾದ ಮೃಗಗಳಲ್ಲಿಯೂ ಇರುವ ಪ್ರೀತಿಯಲ್ಲ ಹೆಚ್ಚಾದ ಸ್ವಾರ್ಥತೆಯೊಂದಿಗೆ ಇರಬಹುದಾದ ಪ್ರೀತಿ. ಪ್ರೀತಿಯ ಪವಿತ್ರಾತ್ಮನನ್ನು ಅಂಗೀಕರಿಸಿಕೊಳ್ಳುವವರಲ್ಲಿ ಈ ಸ್ವಾಭಾವಿಕವಾದ ಪ್ರೀತಿಯು ತೀಕ್ಷ್ಣಗೊಳ್ಳುತ್ತದೆ, ವ್ಯಾಪಕಗೊಳ್ಳುತ್ತದೆ ಹಾಗೂ ಆಳವಾಗಿ ಬಿಡುತ್ತದೆ ಮತ್ತು ಹೆಚ್ಚು ಹೆಚ್ಚಾಗಿ ತನ್ನ ಸ್ವಾರ್ಥ ಗುಣಲಕ್ಷಣಗಳನ್ನು ಕಳೆದುಕೊಳ್ಳುತ್ತದೆ. ಇದು ಉದಾರವಾದ, ಸ್ವಾರ್ಥತ್ಯಾಗದ ಪ್ರೀತಿಯಾಗಿಬಿಡುತ್ತದೆ. ಇದು ಸ್ವಾರ್ಥತೆಯ ಮೇಲೆ ಆತುಕೊಳ್ಳದೆ ನೈತಿಕತೆಯ, ಸತ್ಯದ, ಒಳ್ಳೆಯತನದ ತತ್ವಗಳ ಮೇಲೆ ಆತುಕೊಂಡು ದೇವರ ಮನೋಪ್ರವೃತ್ತಿಯಳ್ಳ ಸಾಮಾನ್ಯವಾದ ಆತ್ಮನನ್ನು ಹೊಂದಿಕೊಂಡಿರುತ್ತದೆ. ಈ ಪ್ರೀತಿಯ ಆತ್ಮವು ಸಂಪೂರ್ಣವಾದದ್ದು ಬರುವ ವರೆಗೆ ಮುಂದುವರೆಯಬೇಕು, ಹೆಚ್ಚು ಹೆಚ್ಚಾಗಿ ಸಮೃದ್ಧಿಗೊಳ್ಳಬೇಕು. ಅದು ಬಂದಮೇಲೆ ಅದಕ್ಕೆ ದಾರಿ ಬಿಟ್ಟುಕೊಡಬೇಕು – **"ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು"** – 1 ಕೊರಿಂಥ 13:10.

ಕರ್ತನ ಜನರಲ್ಲಿ ಅಪೋಸ್ತಲನು ಈ ವಾಕ್ಯಭಾಗದಲ್ಲಿ ಅದ್ಭುತವಾದ ರೀತಿಯಲ್ಲಿ **"ಸ್ವಸ್ಥ ಮನಸ್ಸಿನ ಆತ್ಮ"** ಎಂದು ನಿರೂಪಿಸುವುದಕ್ಕಿಂತ ಹೆಚ್ಚಾದ ಪವಿತ್ರಾತ್ಮನ ಪ್ರಕಟನೆ ಇರುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಕರ್ತನ ಜನರು ಸ್ವಾಭಾವಿಕವಾಗಿ ಲೋಕದ ಜನರಿಗಿಂತ ಹೆಚ್ಚು ದೃಢ ಮನಸ್ಕರಾಗಿರುವುದಿಲ್ಲ. ನಾವೀಗಾಗಲೇ ಕಂಡು ಕೊಂಡಿರುವಂತೆ, ಸುವಾರ್ತೆಯ ಪ್ರವೃತ್ತಿ ಏನೆಂದರೆ, ಬಲಶಾಲಿಗಳು, ಸ್ವಸ್ಥ ಮನಸ್ಸಿರುವವರು .. ತಮ್ಮನ್ನು ಇತರರಿಗೆ ಹೋಲಿಸಿ ಸ್ವಯಂ ತೃಪ್ತಿಗೊಂಡವರು, ಸ್ವಯಂ ನೈತಿಕತೆಯ ಆತ್ಮ ಅಥವಾ ಮನಸ್ಸಿನವರಿಗೆ ಅಪರಿಪೂರ್ಣರಿಗೆ, ತಮ್ಮ ನಿರ್ಬಲಾವಸ್ಥೆಯನ್ನು ತಿಳಿದವರಿಗೆ ಅಂತಹವರು ತಮಗೆ ಮೇಲಣಿಂದ ಕೃಪೆ ಮತ್ತು ಬಲದ ಅವಶ್ಯಕತೆಯಿದೆ ಎಂದು ಅರಿತವರನ್ನು ಆಕರ್ಷಿಸುವುದಾಗಿದೆ.

ಆದರೆ, ಸತ್ಯವು ಒಳ್ಳೆಯ ಹಾಗೂ ಪ್ರಾಮಾಣಿಕ ಮನಸ್ಕರಿಂದ ಅಂಗೀಕಾರವಾಗಿ ಅದರ ನ್ಯಾಯಯುತವಾದ ಫಲಗಳನ್ನು ತರುವಾಗ ಮತ್ತು ಕರ್ತನ ಜನರು ಆತನ ಪವಿತ್ರಾತ್ಮನಲ್ಲಿ ಪಾಲುದಾರರಾಗುವಾಗ, ಸ್ವಾಭಾವಿಕವಾಗಿ ಬಲವಾಗಿದ್ದರೂ, ಬಲಹೀನರಾಗಿದ್ದರೂ ಅವರು ಆ ಮೂಲಕವಾಗಿ **"ಸ್ವಸ್ಥವಾದ ಮನಸ್ಸಿನ ಆತ್ಮ"**ನನ್ನು ಹೊಂದಿಕೊಳ್ಳುವರು – ಅವರ ನಿರ್ಣಯಗಳು ಮೊದಲಿಗಿಂತ ಹೆಚ್ಚು ಸ್ಪಷ್ಟವಾಗಿರುತ್ತವೆ, ಹೆಚ್ಚು ಸತ್ಯವಾಗಿರುತ್ತವೆ, ಹೆಚ್ಚು ನಂಬಿಕೆಗೆ ಅರ್ಹವಾಗಿರುತ್ತವೆ. ಯಾಕೆಂದರೆ ಅವರ ಮನಸ್ಸಿನ ಮುಂದೆ ಎಲ್ಲಾದಕ್ಕಿಂತ ಮೊದಲು ಅವರು ಏನು ಮಾಡಬೇಕು, ಏನು ಮಾಡಬಾರದು ಎಂಬುದರ ಬಗ್ಗೆ ಕರ್ತನ ಮಾತುಗಳ ಸ್ಪಷ್ಟವಾದ ಮಾರ್ಗದರ್ಶನ ಹೊಂದಿರುತ್ತಾರೆ. ಈ ಮಾರ್ಗದರ್ಶನವು ಜೀವನದ ಗುರಿಯ ಬಹುಮಟ್ಟಿನ ಎಲ್ಲಾ ಲಕ್ಷಣಗಳನ್ನೂ ಹೊಂದಿರುತ್ತವೆ. ಕರ್ತನನ್ನು ತಮ್ಮ ಬೋಧಕನು, ಶಿಕ್ಷಕನು ಎಂದು ಒಪ್ಪಿಕೊಂಡಿರುವವರು ಮತ್ತು ತಂದೆಯ ಚಿತ್ತಕ್ಕೆ ವಿಧೇಯರಾಗುವ ಆತನ ವಿಧೇಯತೆಯ ಆತ್ಮನನ್ನು ಉಳ್ಳವರು **"ಸ್ವಸ್ಥವಾದ ಮನಸ್ಸಿನ ಆತ್ಮ"**ನನ್ನು ಹೊಂದಿಕೊಂಡಿರುತ್ತಾರೆ. ಯಾಕೆಂದರೆ ಅವರು ಕೇವಲ ತಮ್ಮ ಸ್ವಂತ ತಿಳುವಳಿಕೆಗಳ ಪ್ರಕಾರ ಸ್ವಯಂ ನಿರ್ಣಯಗಳನ್ನು ನಂಬುವವರಲ್ಲ, ಆದರೆ ಜೀವನದ ದೈವಘಟಿತ ಬದಲಾವಣೆಗಳಲ್ಲಿ, ಅವರುಗಳು ಮನುಷ್ಯಾತೀತ ವಿವೇಕದ ಮಾರ್ಗದರ್ಶನವಿಲ್ಲದವರಂತೆ ಸಂಕಟಗಳ ಪಾಶಕ್ಕೆ ಸಿಲುಕೊಳ್ಳದೆ ಕರ್ತನ ಮಾರ್ಗದರ್ಶನಕ್ಕೆ ವಿಧೇಯರಾಗಿ ಸಂರಕ್ಷಿಸಲ್ಪಟ್ಟಿರುತ್ತಾರೆ.

ನಮ್ಮ ಜನಾಂಗವು ಪತನದ ಫಲವಾಗಿ ಪಾಪದಲ್ಲಿ, ಮತ್ತು ಅದರ ದಂಡನೆಯಾದ ಮರಣದಲ್ಲಿ ಬಿದ್ದು ಹೋದುದರಿಂದ ಸಮಗ್ರ ಲೋಕವು ವಿವಿಧ ಮಟ್ಟಗಳಲ್ಲಿ, ಪರಿಸ್ಥಿತಿ ಮತ್ತು ವಂಶಪಾರಂಪರ್ಯಗಳಿಗನುಸಾರವಾಗಿ ಮಾನಸಿಕವಾಗಿ, ದೈಹಿಕವಾಗಿಯೂ ದೃಢತೆ ಇಲ್ಲದ್ದಾಗಿದೆ. ಕೆಲವರು ದೈಹಿಕವಾಗಿ ಇತರರಿಗಿಂತ ಕಡಿಮೆ ದೃಢತೆಯುಳ್ಳವರಾಗಿರುವಂತೆ, ಕೆಲವರು ಮಾನಸಿಕ ವಾಗಿಯೂ ಕಡಿಮೆ ದೃಢತೆಯುಳ್ಳವರಾಗಿರುತ್ತಾರೆ. ಆದಾಗ್ಯೂ **"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ"** (ರೋಮಾ. 3–10) ಎಂದು ಸುವಾರ್ತೆಯು ತಿಳಿಸುವಂತೆ ಎಲ್ಲರೂ ಸ್ವಸ್ಥತೆ ಇಲ್ಲದವರಾಗಿದ್ದಾರೆ. ಅಲಂಕಾರಿಕವಾಗಿ ಎಲ್ಲರೂ ಗಾಯಗಳಿಂದಲೂ, ಬಾಸುಂಡೆಗಳಿಂದಲೂ, ನಾರುವ ಹುಣ್ಣುಗಳಿಂದಲೂ ಮಾನಸಿಕವಾಗಿಯೂ,

ದೈಹಿಕವಾಗಿಯೂ ಬಾಧಿತರಾಗಿದ್ದಾರೆ (ಯೆಶಾಯ 1:5,6 ನೋಡಿರಿ). ಪಾಪದ ಶಾಪವು ತನ್ನ ಭಾರವಾದ ಕೈಗಳನ್ನು ಸಮಸ್ತ ಮಾನವರ ಮೇಲೆ ಅವರ ಮೈ ಮತ್ತು ಮನಸ್ಸುಗಳ ಮೇಲೆ ಚಾಚಿದೆ.

ಅಂಗಾಂಗಳಲ್ಲಿ ಯಾವುದೇ ಒಂದಕ್ಕಾದರೂ ನೋವುಂಟಾದರೆ ಮನಸ್ಸೂ ಸೇರಿ ಇಡೀ ಶರೀರವು ಪರಿತಪಿಸುತ್ತದೆ ಎಂಬುದು ಎಲ್ಲರಿಗೂ ಚಿರಪರಿಚಿತವಾದ ಸತ್ಯಸಂಗತಿಯಾಗಿದೆ. ದೃಢತೆ ಇಲ್ಲದ ದೇಹದಿಂದ ಬೆಂಬಲಿತವಾಗಿರುವ ಮನಸ್ಸು ಪೂರ್ಣವಾಗಿ ದೃಢವಾಗಿರಲು ಸಾಧ್ಯವಿಲ್ಲ. ಅಜೀರ್ಣವ್ಯಾಧಿಯಿಂದ ವಿಕ್ಷಿಪ್ತಗೊಂಡ ಉದರವು ಆ ವ್ಯಕ್ತಿಯ ಮನಸ್ಸಿಗೆ, ಆತನ ಸಮಸ್ತ ದೈಹಿಕ ರಚನೆಯ ಮೇಲೆ ನೇರವಾದ ಪರಿಣಾಮವನ್ನುಂಟುಮಾಡುತ್ತದೆ. ಯಾರ ಶ್ವಾಸಕೋಶಗಳು ವ್ಯಾದಿಪೀಡಿತವಾಗಿದೆಯೋ ಆ ವ್ಯಕ್ತಿಯು ಅದಕ್ಕೆ ಅನುಗುಣವಾದ ಮಾನಸಿಕ ಹಾನಿಯನ್ನು ತಡೆಗಟ್ಟಲು ಸಾಧ್ಯವಿಲ್ಲ. ಅದರಂತೆ, ಇತರ ಅಂಗಾಗಗಳು ಅಂದರೆ ಹೃದಯ, ಪಿತ್ತಜನಕಾಂಗ ಮತ್ತು ಮೂತ್ರಪಿಂಡಗಳು ಹಾನಿಗೊಂಡು ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಪ್ರಶ್ನಾತೀತವಾಗಿ ಅದರ ಫಲ ಅಕ್ರಮಗೊಂಡ ರಕ್ತ, ಅಕ್ರಮಗೊಂಡ ನರಗಳ ರಚನೆಯಾಗಿದ್ದು ಇದರ ಕೇಂದ್ರವು ಮೆದುಳು ಆಗಿರುತ್ತದೆ. ಅದರಂತೆ ಮೆದುಳು ನೋವಿನ ಉಪದ್ರವಕ್ಕೆ ಒಳಗಾಗುವಾಗ ಅಥವಾ ಅದಕ್ಕೆ ಸರಿಯಾದ ಪೋಷಣೆ ದೊರೆಯದೇ ಇರುವಾಗ ಅಥವಾ ಜಿನುಗುವ ಗ್ರಂಥಿಗಳ ಅಂಗಾಂಗಗಳು ವಿಫಲಗೊಳ್ಳುವಾಗ ಇತರ ವಿವಿಧ ಕಾರ್ಯಗಳಿಗೆ ತೊಂದರೆಯಾಗುವುದು ಅನಿವಾರ್ಯ. ಮೆದುಳು ಸಮರ್ಪಕ ಸ್ಥಿತಿಯಲ್ಲಿದ್ದಾಗ ಮಾಡಿದಂತೆ ಸರಿಯಾದ ರೀತಿಯಲ್ಲಿ ಯೋಚಿಸಲಾರದು ಮತ್ತು ತರ್ಕಬದ್ಧವಾಗಿ ವಿವೇಚಿಸಲಾರದು. ಮನಸ್ಸಿನ ಅವ್ಯವಸ್ಥೆಯು ಸರ್ವೇ ಸಾಮಾನ್ಯವಾಗಿದ್ದು ಅವ್ಯವಸ್ಥೆ ಎಂಬ ಪದವನ್ನು ಸರಾಸರಿಗೂ ಮಿಗಿಲಾದ ಸ್ವಸ್ಥತೆ ಇಲ್ಲದ, ಸಮತೋಲನವಿಲ್ಲದ ತೀವ್ರವಾದ ಸಂಧರ್ಭಗಳಲ್ಲಿ ಅಲ್ಲದೆ ಹೆಚ್ಚಾಗಿ ಉಪಯೋಗಿಸುತ್ತಿಲ್ಲ. ಆದರೆ ಆ ನಿರ್ಣಯಗಳನ್ನು, ತೀರ್ಮಾನಗಳನ್ನು ಯಾರೂ ಪ್ರಶ್ನಿಸುವುದಿಲ್ಲ.

ಪವಿತ್ರಾತ್ಮನ ಅನುಗ್ರಹಿಸುವಿಕೆಯು ಯಾವಾಗ ಮತ್ತು ಯಾವ ರೀತಿಯಲ್ಲಿ ಒಬ್ಬ ಕ್ರೈಸ್ತನಿಗೆ ತನ್ನ ನಿರ್ಣಯಗಳನ್ನು ಸರಿಪಡಿಸಿಕೊಳ್ಳುವಂತೆ ಮಾಡುತ್ತದೆ ಮತ್ತು ಆತನಿಗೆ ಅದು ಸ್ವಸ್ಥ ಮನಸ್ಸಿನ ಆತ್ಮವಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ದೈವಿಕ ಮನಸ್ಸು ಸಮರ್ಕವಾದುದು "ದೃಢವಾದುದು" ಮತ್ತು ಅದರ ಪರಿಣಾಮವಾಗಿ ಕ್ರೈಸ್ತರು ಎಲ್ಲಿಯವರೆಗೆ ತಮ್ಮ ಸ್ವಂತ ಮನಸ್ಸನ್ನು ಮತ್ತು ನಿರ್ಣಯಗಳನ್ನು ಯಾವುದೇ ಅಥವಾ ಎಲ್ಲಾ ವಿಷಯಗಳಲ್ಲಿ ಬದಿಗಿಟ್ಟು, ಅದಕ್ಕೆ ಬದಲಾಗಿ ದೇವರ ಮನಸ್ಸು, ಚಿತ್ತ ಮತ್ತು ನಿರ್ಣಯಗಳು ತಮ್ಮ ಜೀವಿತವನ್ನು ನಿಯಂತ್ರಿಸುವಂತೆ ಒಪ್ಪಿಕೊಳ್ಳುತ್ತಾರೋ ಆವರೆಗೆ ಅವರಲ್ಲಿ ದೃಢ ಸ್ವಸ್ಥ ಮನಸ್ಸಿನ ಆತ್ಮ ಅಥವಾ ಪ್ರವೃತ್ತಿ – ದೇವರ ಮನಸ್ಸು ಇರುತ್ತದೆ. ಕ್ರೈಸ್ತರ ಮೆದುಳುಗಳಲ್ಲಿ ಒಂದು ಬದಲಾವಣೆಯಾಗುತ್ತದೆ ಅಥವಾ ಪ್ರಾಕೃತಿಕ ಕ್ರಮಕ್ಕೆ ವ್ಯತಿರಿಕ್ತವಾಗಿ ಕೆಲಸಮಾಡ ತೊಡಗುತ್ತದೆ ಎಂದು ನಾವು ಹೇಳುತ್ತಿಲ್ಲ, ಆದರೆ ಪವಿತ್ರಾತ್ಮನ, ಸತ್ಯದ ಆತ್ಮನ ಮಾರ್ಗದರ್ಶನದಲ್ಲಿ ಅಂಥವರು ತಮ್ಮ ಸ್ವಂತ ನಿರ್ಣಯಗಳ ಕಾರಣ ಕಂಡು ಬಂದ ವಿವಿಧ ಸಮಸ್ಯೆಗಳಿಗೆ ಕಾರಣವಾದ ತಮ್ಮ ತಪ್ಪುಗಳನ್ನು ಕ್ರಮೇಣವಾಗಿ ಸರಿಪಡಿಸಿಕೊಳ್ಳಲು ಮತ್ತು ದೇವರವಾಕ್ಯಗಳ ಮೂಲಕ ಪವಿತ್ರಾತ್ಮನ ಬೋಧನೆಗಳೊಂದಿಗೆ ಸಾಮರಸ್ಯವಾಗಿರಲು ಕಲಿತು ಕೊಳ್ಳುತ್ತಾರೆ. ಉದಾಹರಣೆಗೆ, ನಮ್ಮಲ್ಲಿ ಒಂದು ಸರಿಯಾಗಿ ಸಮಯ ತೋರಿಸದ ಅಗ್ಗದ ಗಡಿಯಾರವಿದೆ ಎಂದುಕೊಳ್ಳೋಣ. ಅದನ್ನು ಆಗಾಗ್ಗೆ ಕ್ರೋನೋ ಮೀಟರ್‌ಗೆ ಒಳಪಡಿಸಿ ದುರಸ್ತಿಗೊಳಿಸುತ್ತಿದ್ದರೂ ಅದು ಪ್ರತಿ 24 ಘಂಟೆಗಳಿಗೊಮ್ಮೆ ಅರ್ಧ ಘಂಟೆ ಹಿಂದಕ್ಕೆ ಚಲಿಸುತ್ತಾ ಇರುತ್ತದೆ ಎಂದುಕೊಳ್ಳೋಣ. ಮೇಲಾಗಿ, ಅದರ ತಪ್ಪನ್ನು ಯಾವ ರೀತಿ ಅಂದಾಜಿಸಬಹುದೆಂಬುದೂ ಮತ್ತು ಪ್ರತಿ 24 ಗಂಟೆಗೊಮ್ಮೆ ಅದನ್ನು ಸರಿಪಡಿಸುವುದು ಹೇಗೆಂದು ನಮಗೆ ತಿಳಿಯುತ್ತದೆ. ಅದರಂತೆ ಜೀವನದ ಅನೇಕ ಸಂಗತಿಗಳಲ್ಲಿ ನಮ್ಮ ನಿರ್ಣಯಗಳೂ ಇರುತ್ತವೆ. ನಾವು ಅವುಗಳನ್ನು ಸಮರ್ಪಕವಾದ ಪ್ರಮಾಣದಲ್ಲಿ ಅಳತೆಮಾಡುವಾಗ, ನಾವು ನಮ್ಮ ಮಾನಸಿಕ ಮತ್ತು ಬೌದ್ಧಿಕ ಭಾವೋದ್ವೇಗಗಳಲ್ಲಿ ಅತ್ಯಂತವಾಗಿ ಬಲು ವೇಗದಲ್ಲಿದ್ದೇವೆ, ಅಥವಾ ನಿಧಾನಗತಿಯಲ್ಲಿದ್ದೇವೆ, ಅತ್ಯಂತ ಶಕ್ತಿಯುತವಾಗಿದ್ದೇವೆ, ಇಲ್ಲವೇ ಬಲಹೀನರಾಗಿದ್ದೇವೆ ಎಂದು ತಿಳಿದುಬರುತ್ತದೆ. ನಾವು ನಮ್ಮ ಆಲೋಚನಾ ಪದ್ಧತಿಯನ್ನು ಕ್ರಿಸ್ತನವುಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳಲು ಅಸಾಧ್ಯವಾದಾಗ್ಯೂ ನಾವುಗಳು ನಮ್ಮ ಮುಂದಿರುವ ಮಟ್ಟಕ್ಕೆ ತಕ್ಕಂತೆ ಅವುಗಳನ್ನು ಬದಲಾಯಿಸಿಕೊಳ್ಳಲು ಶಕ್ತರಾಗುತ್ತೇವೆ ಆದರೆ ಇವುಗಳು ಸಮರ್ಪಕವಾದ ಮಟ್ಟದಲ್ಲಿ ಇಲ್ಲದಿರುವವರಿಗೆ ಮತ್ತು ಅವುಗಳನ್ನು ಸರಿಪಡಿಸಿಕೊಳ್ಳಲು ಮನಸ್ಸಿಲ್ಲದವರಿಗೆ ತಕ್ಕಂತೆ ಇರಲಾರದು ಮತ್ತು ಅವರುಗಳು ಅವನ್ನು ಒಪ್ಪಿಕೊಳ್ಳುವುದೂ ಇಲ್ಲ, ಅದನ್ನು ಅನುಕರಣೆ ಮಾಡಲೂ ಶಕ್ತರಲ್ಲ.

ಇಂಥಾಃ ಸ್ವಸ್ಥತೆ ಇಲ್ಲದ ಮನಸ್ಸನ್ನು ತನ್ನ ಸ್ನೇಹಿತರುಗಳಲ್ಲಿ, ತನ್ನ ನೆರೆಹೊರೆಯವರಲ್ಲಿ (ಒಮ್ಮೊಮ್ಮೆ ತನ್ನಲ್ಲಿಯೂ ಸಹಾ) ಅವರುಗಳು ತಮ್ಮ ಸಂಗತಿಗಳನ್ನು ಗೌರವಾನ್ವಿತವಾಗಿ ನಿಭಾಯಿಸಲು ಸಾಧ್ಯವಾಗದಿರುವುದನ್ನು ಮತ್ತು ಅವರುಗಳು ಇತರರ ಸಂಗತಿಗಳಲ್ಲಿ ಕಿರುಕುಳಕೊಡುವವರನ್ನು ಗಮನಿಸದೇ ಇರುವವರು

ಯಾರಿದ್ದಾರೆ ? ಅವರು ತಮ್ಮ ಸ್ವಂತ ವ್ಯವಹಾರಗಳನ್ನು ನಿಭಾಯಿಸಲಾಗದಿದ್ದರೂ ಸ್ವಪ್ರತಿಷ್ಠೆಯಿಂದಾಗಿ ಇತರರ ಬಗ್ಗೆ ನಿರ್ಣಯಿಸುತ್ತಾರೆ, ಅವರ ಬಗ್ಗೆ ಅಂತೆಕಂತೆಗಳನೆಬ್ಬಿಸುತ್ತಾರೆ, ಇತರರ ವ್ಯವಹಾರಗಳಲ್ಲಿ ಮೂಗುತೂರಿಸುತ್ತಾರೆ. ಸ್ವಸ್ಥವಲ್ಲದ ಮನಸ್ಸಿಗೆ ಇವು ಪುರಾವೆ – ಒಂದು ಮಟ್ಟದ ಭ್ರಾಂತಿ ಅಲ್ಲವೇನು? ಯಾರ ನಿರ್ಣಯಗಳು ದೃಢವಲ್ಲವಾಗಿದ್ದು ಅವರುಗಳು ಹುಚ್ಚಾಸ್ಪತ್ರೆ ಅಥವಾ ಮಾನಸಿಕ ಅಸ್ವಸ್ಥರ ಶಿಬಿರಗಳಲ್ಲಿ ಪ್ರತಿಬಂಧಿಸುವಂತೆ ಮಾಡುವಲ್ಲಿ ಇದೇ ತತ್ವದ ಅತಿರೇಖವನ್ನು ನಾವು ಗಮನಿಸುವುದಿಲ್ಲವೋ? ಹುಚ್ಚಾಸ್ಪತ್ರೆಗಳಲ್ಲಿರುವ ಕೆಲವರಲ್ಲಿ ಸ್ವಪ್ರತಿಷ್ಠೆ, ಅನುಮೋದನೆ ಮತ್ತು ಅಂಜಿಕೆ ಇವುಗಳು ಸಂಶಯಾತೀತವಾಗಿ ಮಾನಸಿಕ ತೊಂದರೆಗಳ ಬುನಾದಿಗಳಾಗಿವೆ – ಉಳಿದವರಲ್ಲಿ ಹೆಚ್ಚಿನವರು ಭೂತಹಿಡಿದವರಂತೆ ಬುದ್ಧಿ ಭ್ರಮಣ ರಾಗಿರುತ್ತಾರೆ. ನಾವು ಹುಚ್ಚಾಸ್ಪತ್ರೆ ಅಥವಾ ಅಂಥವರ ತಂಗುದಾಣವನ್ನು ಪ್ರವೇಶಿಸಿದರೆ ಅಲ್ಲಿರುವ ಕೆಲವರು ತಾವು ತುಂಬಾ ಶ್ರೀಮಂತರು ಅಥವಾ ತಾವು ರಾಜರುಗಳು ಇಲ್ಲವೇ ರಾಣಿಯರು ಅಥವಾ ಗಣ್ಯರು, ರಾಜಕುಮಾರ/ಕುಮಾರಿಯರು ಎಂಬ ಭ್ರಮೆಯಲ್ಲಿರುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ತುಂಬಾ ಜಂಬಶಾಲಿಗಳೂ, ಮುಂಗೋಪಿಗಳೂ ಮತ್ತು ಸುಲಭವಾಗಿ ಕೋಪಹುಟ್ಟಿಸುವವರೂ ಆಗಿರುತ್ತಾರೆ. ಇತರರು ಈ ಕಾಲ್ಪನಿಕ ತಪ್ಪುಗಳನ್ನು ನಿಭಾಯಿಸಿಕೊಳ್ಳುತ್ತಾರೆ ಮತ್ತು ಅವರುಗಳನ್ನು ಸಾಕಷ್ಟು ಮೆಚ್ಚಿಕೊಳ್ಳಲಿಲ್ಲವೆಂದು ಊಹಿಸುತ್ತಾರೆ ಮತ್ತು ಅವರ ಸ್ನೇಹಿತರುಗಳು ಅವರ ಪ್ರಭಾವದ ಹೆದರಿಕೆಯಿಂದಾಗಿ ಅವರಿಂದ ದೂರವಿರಲು ಶ್ರಮಿಸುತ್ತಾರೆ ಅಥವಾ ಅವರ ಸಾಮರ್ಥ್ಯವನ್ನು ಅಡಗಿಸುತ್ತಾರೆ ಅಥವಾ ಅವರು ಅದೃಷ್ಟವನ್ನು ಪಡಕೊಳ್ಳದಂತೆ ತಡೆಯೊಡ್ಡುತ್ತಾರೆ ಎಂದು ಭಾವಿಸುತ್ತಾರೆ. ಇತರರು, ಅಂಜಿಕೆಯ ಕಾರಣ ಎಲ್ಲರೂ ತಮ್ಮ ಪ್ರಾಣವನ್ನು ತೆಗೆಯ ಬಯಸುತ್ತಾರೆ, ಇಡೀ ಲೋಕವು ಹುಚ್ಚುತನದಿಂದ ತುಂಬಿದೆ ಅವರು ಮಾತ್ರವೇ ಸ್ವಸ್ಥಬುದ್ಧಿಯುಳ್ಳವರು ಅಥವಾ ದೇವರೇ ತಮ್ಮ ವಿರುದ್ಧವಾಗಿದ್ದಾನೆ, ತಾವು ಕ್ಷಮಿಸಲಾಗದ ಪಾಪ ಇತ್ಯಾದಿಗಳನ್ನು ಮಾಡಿರುವುದರಿಂದ ತಮ್ಮ ವಿಧಿಯು ನಿರಂತರವಾದ ಯಾತನೆಗಳಿಂದ ಕೂಡಿದೆ ಎಂದು ಊಹಿಸಿಕೊಳ್ಳುತ್ತಾರೆ.

ಇವುಗಳೆಲ್ಲವೂ ಮಾನಸಿಕ ದುಸ್ಥಿತಿಯ ಅತಿರೇಕದ ಗುಣಲಕ್ಷಣಗಳು. ಮತ್ತು ಇದನ್ನು ಗಮನಿಸುವವರು ಪ್ರತಿನಿತ್ಯವೂ ಲೋಕದ ಎಲ್ಲಾ ನಡೆಗಳಲ್ಲಿ ಕಂಡುಕೊಳ್ಳುತ್ತಾರೆ. ಲೋಕದ ಧೋರಣೆ, ಮತ್ತು ಲೋಕದ ಆತ್ಮನು ಅದರ ಆಕಾಂಕ್ಷೆ ಮತ್ತು ಹೆಮ್ಮೆಗಳೊಡನೆ, ಅದರ ಮೂಢನಂಬಿಕೆಗಳು ಅಂಜಿಕೆಗಳು ಮತ್ತು ತಪ್ಪುಗಳ ಕಾರಣ ಇದನ್ನು ತೀಕ್ಷಗೊಳಿಸುತ್ತದೆ ಮತ್ತು ಇದು ನಾಗರೀಕ ಪ್ರಪಂಚದಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಾ ಹೋಗುತ್ತದೆ.

ಇವರುಗಳಿಗೆ ಬೇಕಾಗಿರುವುದು – ನಮಗೆ ಮತ್ತು ಮಾನವ ಜಾತಿಯವರಿಗೆ ಬೇಕಾದುದು – ಸ್ವಸ್ಥತೆಯುಳ್ಳ ಆರೋಗ್ಯಕರ ಮನಸ್ಸು ; ಆದರೆ ಪ್ರಪಂಚದ ಮಾನಸಿಕ ಹಾಗೂ ದೈಹಿಕ ಕೊರತೆಗಳ ಸಾಮಾನ್ಯ ಗುಣಪಡಿಸುವಿಕೆಯು ಮಹಾ ವೈದ್ಯನ ಕೈಯಲ್ಲಿರುವ ಸಮಯವು ಮಿಲಿಯಾಂತರ ಯುಗದಲ್ಲಿ ಸಂಪೂರ್ಣವಾಗಿ ಪರಿಚಯಿಸಲ್ಪಡುವ ಕಾಲವಾಗಿದೆ; ಆದರೆ, ಆ ಯುಗವನ್ನು ಸೂಕ್ತ ಸಮಯ ಬರುವರೆಗೆ ಪರಿಚಯಿಸಲು ಸಾಧ್ಯವಿಲ್ಲ ಮತ್ತು ಅದರ ಪರಿಹಾರ ಮತ್ತು ಆಶೀರ್ವಾದಗಳು ಈಗಲೇ ಬರಲಾರವು. ಈ ಸಮಯದಲ್ಲಿ ಕರೆಯಲ್ಪಟ್ಟ ಸುವಾರ್ತಾ ಸಭೆಯು ತನ್ನ ಕರ್ತನ ಮತ್ತು ಆತನ ವಾಕ್ಯಗಳ ಮೂಲಕವಾಗಿ ಆತನ ಪವಿತ್ರಾತ್ಮನನ್ನೂ – ಸ್ವಸ್ಥವಾದ ಮನಸ್ಸಿನ ಆತ್ಮನನ್ನು ಪಡಕೊಳ್ಳುತ್ತದೆ. ಇದು ತಂದೆಯ ಮನಸ್ಸು ಅಥವಾ ಆತ್ಮಕ್ಕೆ ಸಮನಾಗಿರುತ್ತದೆ. ಒಬ್ಬೊಬ್ಬನೂ ಪಡಕೊಂಡಿರುವ ಸೌಲಭ್ಯಗಳನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳುತ್ತಾನೋ ಅಷ್ಟರಮಟ್ಟಿಗೆ ಲೋಕದಲ್ಲಿರುವ ಮನುಕುಲವನ್ನು ಬಾಧಿಸುವ ಸ್ವಾಭಾವಿಕವಾದ ಮನಸ್ಸಿನ ಮತ್ತು ದೇಹದ ತೊಂದರೆಗಳ ಮೇಲೆ ಉಪಯೋಗಿಸಲು ಸಹಾಯ ಪಡೆಯುತ್ತಾನೆ. ಅಪೋಸ್ತಲನ ಮೂಲಕವಾಗಿ ದೇವರ ಮಾತುಗಳು ನಮ್ಮನ್ನು ಈ ರೀತಿಯಾಗಿ ನಿರ್ದೇಶಿಸುತ್ತದೆ – **"ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವುದೇನೆಂದರೆ, ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥಾಃ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ** (ದೇಹಕ್ಕೆ ಅನುಸಾರವಾಗಿ ಅಲ್ಲ ಆದರೆ ನೂತನ ಸ್ವಭಾವಕ್ಕನುಸಾರವಾಗಿ) **ನ್ಯಾಯುವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು"** (ರೋಮಾ. 12:3). ಅನೇಕರೊಡನೆ ತಮ್ಮನ್ನು ಅತಿಯಾಗಿ ಮೆಚ್ಚಿಕೊಳ್ಳುವುದನ್ನು ಜಯಿಸುವ ಮತ್ತು ತಮ್ಮ ಸ್ವಂತ ಮೇಧಾಶಕ್ತಿಗಳಿಗೆ ತಕ್ಕಂತೆ ಸ್ವಸ್ಥತೆಯ ಆತ್ಮನನ್ನು ಹೊಂದಿಕೊಳ್ಳುವ ಈ ಕಾರ್ಯವು ಜೀವನ ಪರ್ಯಂತದ ಕಾರ್ಯವಾಗಿದೆ. ಆದರೆ ತಮ್ಮ ಹೆಮ್ಮೆಯನ್ನು ಸರಿಪಡಿಸಿಕೊಳ್ಳುವ ಈ ಕಾರ್ಯದಲ್ಲಿ ಕರ್ತನ ಮಾತುಗಳಿಂದ ಅವರಿಗೆ ಸಹಾಯ ದೊರೆಯುತ್ತದೆ. ಆ ಮಾತೇನೆಂದರೆ – **"ಶಾಂತರು ಧನ್ಯರು, ಅವರು ಭೂಮಿಗೆ ಬಾಧ್ಯರಾಗುವರು"**. ಅಪೋಸ್ತಲನ ಮಾತುಗಳಿಂದ ನೆರವು ಪಡೆಯುತ್ತಾರೆ. ಅದೇನೆಂದರೆ "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ

ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು" – ಮತ್ತಾಯ 5:5; ಯಾಕೋಬ 4:6, 1 ಪೇತ್ರ 5,6 ಎಂಬುದೇ.

ಆದರೆ, ಸತ್ಯಸಂಗತಿ ಏನೆಂದರೆ, ಲೋಕದ ಕ್ರಮಗಳಿಗನುಸಾರವಾಗಿ ಮತ್ತು ಅವರವರ ಬುದ್ಧಿವಂತಿಕೆಯ ಸ್ವಂತ ಅಂದಾಜಿಗೆ ತಕ್ಕಂತೆ ದೇವರು ಲೌಕಿಕ ದೃಷ್ಟಿಯಲ್ಲಿ ಗಣ್ಯರನ್ನಾಗಲೀ, ಜ್ಞಾನಿಗಳನ್ನಾಗಲೀ ಆರಿಸಿಕೊಳ್ಳಲಿಲ್ಲ. ಬದಲಾಗಿ ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ನಂಬಿಕೆಯಲ್ಲಿ ಐಶ್ವರ್ಯವಂತರಾದ ಈ ಲೋಕದ ಬಡವರನ್ನು ದೇವರು ಆರಿಸಿಕೊಂಡಿದ್ದಾನೆ – ಅವರು ತಮ್ಮ ಸ್ವಂತ ಬುದ್ಧಿವಂತಿಕೆಯ ಮೇಲೆ ಅಥವಾ ನೈತಿಕತೆಯ ಮೇಲೆ ನಂಬಿಕೆ ಇಡುವವರಲ್ಲ, ಆದರೆ ಅವರಿಗೆ ಕ್ರಿಸ್ತನಲ್ಲಿ ತಮ್ಮ ಜ್ಞಾನವೂ, ನೀತಿನಿರ್ಣಯವು ತಮ್ಮ ಸರ್ವಸ್ವವೂ ಎನ್ನುವವರನ್ನು ಆರಿಸಿಕೊಂಡಿದ್ದಾರೆ.

ಅದರಂತೆ 'ಭಯದ ಆತ್ಮ' ಇರುವವರು ಸಹಾ ಅದನ್ನು ಪಡಕೊಂಡರೆ, 'ಸತ್ಯದ ಆತ್ಮನ', 'ಪ್ರೀತಿಯ ಆತ್ಮ'ನ ಮೂಲಕ ತಟಸ್ಥಗೊಳಿಸಿಕೊಳ್ಳಲು ಸಹಾಯ ಪಡಕೊಳ್ಳುತ್ತಾರೆ. ಯಾಕೆಂದರೆ **"ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ . . ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ"** (1 ಯೋಹಾನ 4:18). ಅವರು ದೇವರನ್ನು ಆತನ ವಾಕ್ಯಗಳ ಮೂಲಕ ಮತ್ತು ಅದರಲ್ಲಿ ಅಡಗಿರುವ ಆತನ ಕೃಪಾಯೋಜನೆ ಅರಿತುಕೊಳ್ಳಲು ಕಲಿಯುವಾಗ, ಅನೇಕರನ್ನು ತೊಂದರೆ ಪಡಿಸುವ ಅವರ ಮನಸ್ಸಿನಲ್ಲಿರುವ ಭಯಾನಕವಾದ ಅಂಜಿಕೆಯೆಂಬ ದೊಡ್ಡ ದುಃಸ್ವಪ್ನವನ್ನು ತೆಗೆದುಹಾಕುತ್ತದೆ. ಅಂಜಿಕೆಯ ಬದಲಾಗಿ ಅದು ಅವರಲ್ಲಿ ನಿರೀಕ್ಷೆಯನ್ನುಂಟುಮಾಡುತ್ತದೆ. ಈ ನಿರೀಕ್ಷೆಯು ನಾಚಿಕೆಯನ್ನುಂಟುಮಾಡುವುದಿಲ್ಲ. ಯಾಕೆಂದರೆ ದೇವರ ಪ್ರೀತಿಯು ಪವಿತ್ರಾತ್ಮನ ಮೂಲಕ ಅವರ ಹೃದಯದ ತುಂಬೆಲ್ಲಾ ಚೆಲ್ಲಲ್ಪಟ್ಟಿದೆ – ಈ ಆತ್ಮವು ಸ್ವಸ್ಥ ಮನಸ್ಸಿನ ಆತ್ಮವಾಗಿದೆ.

ಅದರಂತೆ ಜೀವನದಲ್ಲಿ ಏನಾದರೂ ನೆರವೇರಿಸಬೇಕಾದಲ್ಲಿ ತೀರಾ ನಮ್ರರಾಗಿರುವವರು (ಆತ್ಮವಿಶ್ವಾಸದ ಕೊರತೆಯುಳ್ಳವರು) ಅದೇ ಸತ್ಯದ ಆತ್ಮನಿಂದ ಉತ್ತೇಜಿಸಲ್ಪಡುವರು, ಮೇಲಕ್ಕೆತ್ತಲ್ಪಡುವರು ಮತ್ತು ಅವರು ತಮಗೂ ಮತ್ತು ಬೇರೆಯವರಿಗೂ ಉಪಯೋಗವಾಗುವಂತೆ ಮಾಡಲ್ಪಡುವರು. ಆ ಆತ್ಮವು ಮಿತಿಮೀರಿದ ಆತ್ಮವಿಶ್ವಾಸವುಳ್ಳವರನ್ನು, ಸ್ವಯಂ ಪ್ರತಿಪಾದಿಸುವವರನ್ನು, ಸ್ವಯಂಪ್ರಜ್ಞೆಯುಳ್ಳವರನ್ನು, ಸ್ವಯಂ–ಅಹಂಭಾವವುಳ್ಳವರನ್ನು ಆಕ್ಷೇಪಿಸುವುದು, ಸರಿಪಡಿಸುವುದು. ಮೊದಲಿನವರು ದೇವರ ಸಹಾಯದ ಭರವಸೆಗಳಿಂದ ಪ್ರೋತ್ಸಾಹ ಹೊಂದಿಕೊಳ್ಳುವರು; ಎರಡನೆಯವರು ಹದ್ದುಬಸ್ತಿನಲ್ಲಿ ಇಡಲ್ಪಡುವರು, ಸುಧಾರಿಸಲ್ಪಡುವರು, ದೇವರಿಗೆ ಪ್ರೀಯವಾಗಿರುವುದರ ಆಲೋಚನೆಗಳ ಅಧೀನಕ್ಕೆ ಮತ್ತು ಸ್ವಯಂ ಸಹಾಯ ಹೊಂದಿಕೊಳ್ಳುವಂತೆ ತರಲ್ಪಡುವರು; ಅಪೋಸ್ತಲನು ಹೇಳುವಂತೆ **"ಇಂಥಿಂಥದನ್ನು** (ತನ್ನ ಸ್ವಂತ ವಿವೇಕದ ಬಗ್ಗೆ) **ತಿಳುಕೊಂಡಿದ್ದೇನೆಂದು ನೆನಸಿದವನು ತಾನು ತಿಳಿಯಬೇಕಾದ ರೀತಿಯಿಂದ ಇನ್ನೂ ತಿಳುಕೊಳ್ಳಲಿಲ್ಲ"** (1 ಕೊರಿಂಥ 8:2). ಆದರೆ ಗುಣಲಕ್ಷಣಗಳ ಬದಲಾವಣೆಯು ನಾವು 'ಸ್ವಾಮಿ' 'ಸ್ವಾಮಿ' ಎಂದು ಹೇಳಿಕೊಳ್ಳುವುದರಿಂದಾಗಲೀ ಅಥವಾ ಸತ್ಯವೇದವನ್ನು ಹೊಂದಿಕೊಂಡಿರುವುದರಿಂದಾಗಲೀ, ಅಥವಾ ಯಾವುದಾದರೊಂದು ಮಾನವ ನಿರ್ಮಿತ ಸಭೆಯ ಸದಸ್ಯರಾಗುವುದರಿಂದಾಗಲೀ ಬರುವಂತದಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ನಾವು ನೇರವಾಗಿ ಆತನಿಂದ ಆತನ ವಾಕ್ಯದ ಆತ್ಮನನ್ನು, ಸತ್ಯದ ಆತ್ಮನನ್ನು, ಪವಿತ್ರವಾದ ಆತ್ಮನ್ನು, ಸ್ವಸ್ಥಮನಸ್ಸಿನ ಆತ್ಮನನ್ನು ಆತನ ಮತ್ತು ತಂದೆಯ ಪವಿತ್ರ ಆತ್ಮನನ್ನು ಹೊಂದಿಕೊಳ್ಳುವುದರಿಂದ ಅದು ಬರುವುದಾಗಿದೆ.

ಮಾನವನು ದೇವರ ಕೃಪೆಯಿಂದ ಮತ್ತು ಆತನು ಸ್ವತಃ ಆ ಕೃಪೆಯನ್ನು ಅಂಗೀಕರಿಸಿರುವುದರಿಂದ, ಸ್ವಸ್ಥವಾದ ಮನಸ್ಸನ್ನು ಹೊಂದಿಕೊಂಡಿರುವನು ಮತ್ತು ಉಳಿದ ಮಾನವರಿಗಿಂತ ಹೆಚ್ಚು ಸೌಲಭ್ಯಗಳನ್ನು ಪಡಕೊಂಡಿರುವನು; ಯಾಕೆಂದರೆ ಸ್ವಸ್ಥವಾದ ಮನಸ್ಸಿನ ಆತ್ಮವು ವಿವೇಕದ ಆತ್ಮವಾಗಿದೆ. ಅಂಥವರು ಇತರರಿಗಿಂತ ಜೀವನದ ಮೌಲ್ಯಗಳಿಗೆ – ಸಂಪತ್ತು, ಖ್ಯಾತಿ ಮತ್ತು ಸಾಮಾಜಿಕ ಸ್ಥಾನಮಾನ ಮುಂತಾದವುಗಳಿಗೆ ಹೆಚ್ಚು ಬೆಲೆಕೊಡುತ್ತಾರೆ. ಆತನ ನೂತನ ದೃಷ್ಟಿಕೋನದಿಂದ ಇವುಗಳ ಬಗ್ಗೆ ಇತರರು ಗಮನಿಸದ ಸಂಗತಿಗಳನ್ನು ಆತನು ಕಂಡುಕೊಳ್ಳುವನು. ದೇವರ ವಾಕ್ಯಗಳಿಂದ ಬೋಧಿಸಲ್ಪಟ್ಟ ಆತನ ಮನಸ್ಸು ಆತನು ಈ ಲೋಕದ ಎಲ್ಲಾ ಸಂಪತ್ತನ್ನು ಶೇಖರಿಸಿಕೊಂಡಲ್ಲಿ ಅದರಲ್ಲಿ ತಾನು ಸಾಯುವಾಗ ಏನನ್ನೂ ಕೊಂಡು ಹೋಗಲಾರೆನೆಂಬುದನ್ನು ಗ್ರಹಿಸಿಕೊಳ್ಳುತ್ತಾನೆ. ಕೀರ್ತಿ ಎಂಬುದು ಬಹಳ ಪೊಳ್ಳಾಗಿದೆ ಮತ್ತು ನಶ್ವರವಾದುದು ಮತ್ತು ಜೀವನದ ಬಿಡುವಿಲ್ಲದ ವೇಗದಲ್ಲಿ ಸತ್ತವರನ್ನು ಬಲು ಬೇಗ ಮರೆತುಬಿಡುತ್ತಾರೆ ಎಂಬುದನ್ನು ಆತನು ಕಂಡುಕೊಳ್ಳುತ್ತಾನೆ. ಸಮಾಜವು ಮತ್ತು ಗೌರವ, ಸ್ಥಾನಮಾನ ಮುಂತಾದವುಗಳು ಸಹಾ ಪೊಳ್ಳಾದುದು, ಕೆಲವೊಮ್ಮೆ ಕಪಟವುಳ್ಳದ್ದು ಮತ್ತು ಅದರ ಉಕ್ಕೇರುವಿಕೆಯು – ಕೂಡಲೇ ಅಲ್ಲವಾದರೂ ಆರ್ಥಿಕ ವಿಪತ್ತಿನಲ್ಲಿ ಮರಣದೊಂದಿಗೆ ಮುಕ್ತಾಯಗೊಳ್ಳುತ್ತದೆ ಎಂದು ಆತನು ಕಂಡುಕೊಳ್ಳುತ್ತಾನೆ. ಲೋಕದ ಭಾಷೆಯಲ್ಲಿ ಅವರು 'ಒಂದು ಮೊಂಬತ್ತಿಗೂ ಸಮವಲ್ಲ' ಎಂಬುದನ್ನು

ಅವರು ಕಾಣುತ್ತಾರೆ. ನಿಜವಾಗಿಯೂ, ಈ ಲೋಕದ ಸರಾಸರಿ ಪುರುಷ ಮತ್ತು ಸ್ತ್ರೀಯ ದೃಷ್ಟಿಕೋನದಲ್ಲಿ ಜೀವನವು ಇಸ್ಪೀಟು ಎಲೆಯ ಆಟದಂತೆ. ಅದರ ಫಲಿತಾಂಶಗಳು ಅತೃಪ್ತಿಕರವಾಗಿರುತ್ತವೆ. ಯಾಕೆಂದರೆ. ಹೆಚ್ಚು ಭಾಗ್ಯಶಾಲಿಗೂ ಕಡೆಯಲ್ಲಿ ಏನೂ ದೊರೆಯದು.

ಮತ್ತೊಂದೆಡೆಯಲ್ಲಿ, ದೇವರ ಮಕ್ಕಳು, ಈಗ ಆತನ ಸುವಾರ್ತಾಕಾಲದ 'ಮಹಾಕರೆಗೆ' ಪವಿತ್ರಾತ್ಮನಿಂದ ಜನಿಸಿದವರಿಗೆ ಏನೋ ಕೊಡುಗೆ ಇದ್ದು ಅವರ ಮನಸ್ಸುಗಳು ಅದರಿಂದ ಆಕರ್ಷಿತವಾಗಿವೆ ಮತ್ತು ಜನಸಾಮಾನ್ಯರಲ್ಲಿ ಉಂಟಾಗುವ ಕ್ಷುಲ್ಲಕ ಮತ್ತು ಅವೇಶಪೂರಿತವಾದ ಭ್ರಮೆಯ ಸಂಗತಿಗಳಿಂದ ದೂರವಿರಿಸಿದೆ. ಅವರದು ಉನ್ನತವಾದ ಸಂತೋಷ, ಉನ್ನತ ಮಟ್ಟದ ಸಾಮಾಜಿಕ ನೆಲೆಗೆ, ಹೆಚ್ಚಿನ ಸಿರಿವಂತಿಕೆಗೆ ಮತ್ತು ರಾಜ್ಯಕ್ಕೆ – ಪರಲೋಕದ ಸಂಪತ್ತಿಗೆ ಮತ್ತು ನಿತ್ಯ ನಿರಂತರವಾದ ದೇವರ ರಾಜ್ಯಕ್ಕೆ ಅವರದು ಉನ್ನತವಾದ ಆಕಾಂಕ್ಷೆಗಳು. ಅವರ ಈ ಆಕಾಂಕ್ಷೆಗಳು ದೈವಿಕ ವಾಗ್ದಾನಗಳಿಂದ ಉತ್ತೇಜಿಸಲ್ಪಟ್ಟಿದ್ದು ಅವುಗಳು ಪವಿತ್ರವಾದ ಆಕಾಂಕ್ಷೆಗಳಾಗಿವೆ ಮತ್ತು ಕರುಣೆ ಮತ್ತು ಉತ್ತಮ ಫಲಗಳಿಂದ ತುಂಬಿಕೊಂಡಿದೆ ಮತ್ತು ಪ್ರೀತಿಯ ದೆಸೆಯಲ್ಲಿ ಕಾರ್ಯ ಸಾಧಿಸುತ್ತದೆ. ಅದೇ ಸಮಯದಲ್ಲಿ ಈ ಲೋಕದ ಆಕಾಂಕ್ಷೆಗಳು ಸ್ವಾರ್ಥತೆಯ ನೆಲೆಯಲ್ಲಿ ಕಾರ್ಯ ಸಾಧಿಸುತ್ತವೆ.

ಈ ಲೋಕದ ಆಟದ ಸಾಮಾನುಗಳಿಂದ, ಒಣಜಂಬ ಮತ್ತು ಆಕಾಂಕ್ಷೆಗಳಿಂದ ತಮ್ಮ ಗುರಿಯು ಮೇಲ್ಲೋಕದವುಗಳ ಕಡೆಗೆ ಎತ್ತಲ್ಪಟ್ಟ ಈ ಲೋಕದ ಪುರುಷರು ಮತ್ತು ಸ್ತ್ರೀಯರಿಗೆ ಖಂಡಿತವಾಗಿಯೂ ಪ್ರಸ್ತುತ ಜೀವಿತದ ಎಲ್ಲಾ ಸಂಗತಿಗಳ ಬಗ್ಗೆ ದೃಢವಾದ ನಿರ್ಣಯಗಳನ್ನು ಕೈಗೊಳ್ಳುವ ಅವಕಾಶಗಳು ಇರುತ್ತವೆ – ಯಾಕೆಂದರೆ ಅವರು ಅವುಗಳ ಮೇಲೆ ತುಲನಾತ್ಮವಾಗಿ ಆಸಕ್ತಿಯಿಲ್ಲದ ದೃಷ್ಟಿಕೋನದಲ್ಲಿ ನೋಡುತ್ತಾರೆ. ಅವರು ಈ ಲೋಕದಲ್ಲಿರುತ್ತಾರೆ ಮತ್ತು ಅದರಲ್ಲಿ ಜೀವಿಸುವ ಕೃಪೆಹೊಂದಿರುತ್ತಾರೆ ಮತ್ತು ಈ ಉದ್ದೇಶಕ್ಕೆ ಎಲ್ಲಾ ಜನರ ದೃಷ್ಟಿಗೆ ಯೋಗ್ಯವಾದುದು, ಉಚಿತವಾದುದು ಪ್ರಾಮಾಣಿಕವಾದದೂ ಆದ ಸಂಗತಿಗಳು ಅವರಿಗೆ ಒದಗಿಬರುತ್ತವೆ. ಆದರೆ ಈ ಲೋಕದ ಸಂಗತಿಗಳ ಬಗ್ಗೆ ಗುರಿಯಿಲ್ಲದ ಆಕಾಂಕ್ಷೆಗಳಿಂದ ಬಿಡುಗಡೆ ಹೊಂದಿದ್ದು ಆತನು ಅದಕ್ಕೆ ಅನುಪಾತವಾಗಿ ದ್ರವ್ಯಾಶೆ, ಲೋಭ, ಒಣಜಂಭ ಮುಂತಾದವುಗಳ ಒತ್ತಡದಿಂದಲೂ ಬಿಡುಗಡೆ ಹೊಂದಿಕೊಳ್ಳುತ್ತಾನೆ. ಮತ್ತು ಉತ್ತಮವಾಗಿ ಆಲೋಚಿಸಲು, ನ್ಯಾಯವಾಗಿ ಕಾರ್ಯಸಾಧಿಸಲು ಶಕ್ತನಾಗುತ್ತಾನೆ ಮತ್ತು ಎಲ್ಲರೆಡೆ ಕರುಣೆ ಮತ್ತು ಅನುಕಂಪಗಳನ್ನು ಬೀರುವವನಾಗುತ್ತಾನೆ. ಸ್ವಸ್ಥ ಮನಸ್ಸಿನ ಈ ಆತ್ಮನು ಅಥವಾ ಅನುಭವಿ ಕ್ರೈಸ್ತನ ಉತ್ತಮ ನಿರ್ಣಯಗಳು ಆತನ ಈ ಲೋಕದ ಮಾಂಸ ಶರೀರದ ಮನಸ್ಸಿನ ದುರಸ್ತಿ ಎಂದೆನಿಸಿಕೊಳ್ಳುವುದಿಲ್ಲ ಆದರೆ ಅದು ಮೇಲಿನಿಂದ ದೇವರ ಉನ್ನತ ಹಾಗೂ ಅಮೂಲ್ಯವಾದ ವಾಗ್ದಾನಗಳ ಮೂಲಕ ಆತನಲ್ಲಿ ಹುಟ್ಟಿಬಂದ ನೂತನ ಮನಸ್ಸು ಅಥವಾ ಪ್ರವೃತ್ತಿಯಾಗಿದೆ – **"ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ"** (2 ಪೇತ್ರ 1:4). ಆತನು ತನ್ನ ನೂತನ ಆತ್ಮ ಅಥವಾ ಸ್ವಸ್ಥ ಮನಸ್ಸಿನ ಪ್ರವೃತ್ತಿಯ ಕಾರಣ, ಕರ್ತನ ಪವಿತ್ರಾತ್ಮನಿಂದ ಸಹಾಯ ಹೊಂದಿದ್ದಾನೆ. ಮತ್ತು ಆತನ ಮನಸ್ಸು ಆತನು ಪಡಕೊಳ್ಳುವ ಹಾಗೂ ತುಂಬಲ್ಪಡುವ ಪವಿತ್ರಾತ್ಮನ ಅನುಪಾತಕ್ಕನುಸಾರವಾಗಿ ದೃಢವಾಗಿರುವುದು. ಇದು ಕರ್ತನ ಮೇಲಿನ ಆತನ ಪ್ರೀತಿಯ ಅನುಪಾತಕ್ಕೆ ತಕ್ಕಂತೆ ರಭಸದಿಂದಲೂ ಅಥವಾ ನಿಧಾನಗತಿಯಿಂದಲೂ ಇರುತ್ತದೆ ಮತ್ತು ಆತನ ನೈತಿಕತೆಯು ಉತ್ಸುಕವಾಗಿ ಇಲ್ಲವೇ ಉದಾಸೀನವಾಗಿ ಇರುತ್ತದೆ.

**"ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ ಕೊಂಡರೂ ಪ್ರಾಣ** (ಆತನ ಇರುವಿಕೆಯ ಅಥವಾ ಅಸ್ಥಿತ್ವದ) **ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?"** (ಮತ್ತಾಯ 16:26) ಎಂಬುದಾಗಿ ಕರ್ತನು ವಿಚಾರಿಸುತ್ತಾನೆ. ದೃಢ ಮನಸ್ಸಿನ ವ್ಯಕ್ತಿಯು ಆತನು ಹೊಂದಿರುವ ಆತನ ಅಸ್ಥಿತ್ವದ ಅಮೂಲ್ಯ ಸಂಗತಿಗಳನ್ನು ಯಾವುದಕ್ಕಾದರೂ – ಸಂಪತ್ತು, ಕೀರ್ತಿ ಮತ್ತು ಅಧಿಕಾರಕ್ಕಾಗಿ ವಿನಿಮಯ ಮಾಡಿಕೊಳ್ಳಲಾರನು. ಯಾರಾದರೂ ಸ್ವಸ್ಥ ಮನಸ್ಸಿನ ಆತ್ಮನನ್ನು ಹೊಂದಿಕೊಳ್ಳುವ ಅನುಪಾತಕ್ಕೆ ತಕ್ಕಂತೆ ಇದು ಅವರ ಅಂದಾಜಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಲೋಕವು ವಿರುದ್ಧವಾದವುಗಳನ್ನು ಮಾಡಿ ಆ ಮೂಲಕ ತನ್ನಲ್ಲಿ ಮಾನಸಿಕ ದೃಢತೆ ಇಲ್ಲದಿರುವಿಕೆಯನ್ನು ರುಜುವಾತು ಪಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಲೋಕದ ಅತಿ ಬುದ್ಧಿವಂತರು ಎಂದು ಹೇಳಿಕೊಳ್ಳುವವರೂ ತೃಪ್ತಿಕೊಡದ – ಸಂಪತ್ತನ್ನು ಕೂಡಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ; ಮಾನ ಮಾರ್ಯದೆ ಹೊಂದಿಕೊಳ್ಳಲು, ಸಾಮಾಜಿಕ ಸ್ಥಾನಮಾನಕ್ಕಾಗಿ, ಉಚ್ಚಪದವಿಗಾಗಿ, ವ್ಯರ್ಥವಾದ ವೈಭವಗಳಿಗಾಗಿ ಪಾಪಮಯ ವೈಭೋಗಗಳಿಗಾಗಿ ಕಚ್ಚಾಡುತ್ತಿದ್ದಾರೆ. ಭವಿಷ್ಯ ಜೀವನ ಇಲ್ಲದಿರುವಲ್ಲಿಯೂ, ದೃಢ ಮನಸ್ಸಿನ ಆತ್ಮ ಇರುವವರೆಲ್ಲರೂ ಅಂಥಾಃ ಕ್ರಮಗಳು ಅವಿವೇಕತನದ್ದು ಎಂದು ಕಂಡುಕೊಳ್ಳುತ್ತಾರೆ; ಹೆಚ್ಚಾದವರು ತಮ್ಮ ಪ್ರಸ್ತುತ ಜೀವಿತದಲ್ಲಿ ಸಂತೋಷ ಪಡಕೊಳ್ಳಲು ಸಿದ್ಧವಾಗುವುದರಲ್ಲಿ

ಕಳೆಯುತ್ತಾರೆ ನಂತರದಲ್ಲಿ ಮರಣ ಶಯ್ಯೆಯಲ್ಲಿ ಮಲಗುವಾಗ ತಾವು ಬಯಸಿದ್ದು ತಮಗೆ ದೊರೆಯಲಿಲ್ಲವೆಂದು ಗ್ರಹಿಸಿಕೊಳ್ಳುತ್ತಾರೆ. ಅವರು ಬಿಟ್ಟುಹೋಗುವ ಕೀರ್ತಿ ಅಥವಾ ಸಂಪತ್ತಾಗಲೀ ಆ ಕೂಡಲೇ ಚದುರಿಹೋಗುತ್ತದೆ ಮತ್ತು ಅದು ಚದುರಿಹೋಗದಿದ್ದರೆ ಅವರ ಅವಿವೇಕತನದ, ಲೋಭದ ಮತ್ತು ಮನಸ್ಸಿನ ಸ್ವಸ್ಥತೆ ಇಲ್ಲದಿರುವಿಕೆಯ ಸ್ಮಾರಕವಾಗಿ ಉಳಿದುಹೋಗುತ್ತದೆ.

ಈ ಲೋಕದ ಜೀವನವು ವಿವೇಚನೆಯಿಲ್ಲದ ಗುರಿಯಿಂದ, ಆಕಾಂಕ್ಷೆಗಳಿಂದ ಬರಿದಾಗಿದ್ದು ಅಪೋಸ್ತಲನು ಹೇಳುವಂತೆ **"ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ** (ಫಲವಿಲ್ಲದ) **ನಡವಳಿಕೆ"** (1 ಪೇತ್ರ 1:18) ಯಾಗಿ ಕಂಡುಬರುತ್ತದೆ. ಅಯೋಗ್ಯವಾದ ವಸ್ತುಗಳಿಗಾಗಿ ಶ್ರಮಿಸುವುದು ವಂಶಪಾರ್ಯಂಪರ್ಯವಾದುದು; ಜನರು ಸಂಗತಿಗಳನ್ನು ವಿವೇಚಿಸುವುದಿಲ್ಲ. ಆದರೆ ತಮ್ಮ ತಂದೆತಾಯಿಗಳು ತೋಡಿದ ಜಾಡಿನಲ್ಲೇ ಸಾಗಲು ಬಯಸುತ್ತಾರೆ. ಆದರೆ ನಾವು ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ಬಿಡುಗಡೆಹೊಂದಿರುವ ಕಾರಣ ನಮ್ಮ ಕ್ರಮಗತಿಯನ್ನು ಬದಲಾಯಿಸಿಕೊಳ್ಳಲು ಕಲಿತಿದ್ದೇವೆ ಎಂಬುದಾಗಿ ಅಪೋಸ್ತಲನು ಹೇಳುತ್ತಾನೆ. ನಾವು ಕೃಪಾ ವಾಕ್ಯದ ಮೂಲಕ ಈ ಲೋಕದ ಕ್ರಮವು ವ್ಯರ್ಥವಾದುದು ಮತ್ತು ಎಲ್ಲರೂ ನೀತಿಭ್ರಷ್ಟತೆಯ ಕಾರಣ – ಅವರಲ್ಲಿ ಪತನದ ಕಾರಣ ದೃಢವಾದ ಮನಸ್ಸು ಇಲ್ಲದಿರುವಿಕೆಯಿಂದ ಈ ವ್ಯರ್ಥವಾದ ಕ್ರಮವನ್ನು ಅನುಸರಿಸುತ್ತಿದ್ದಾರೆ ಎಂದು ಕಂಡುಹಿಡಿದಿದ್ದೇವೆ. – ಮತ್ತು ಶ್ರೇಷ್ಠವಾದ ಕ್ರಯದ ಬಗ್ಗೆ ಕಲಿತುಕೊಂಡವರಾಗಿ ನಾವು ಸಂತೋಷದಿಂದ ನಮ್ಮನ್ನು ವಿಮೋಚಿಸಿದ ಆತನಿಗೆ ಪ್ರತಿಷ್ಠೆಪಡಿಸಿಕೊಂಡವರಾಗಿ ಆತನ ಆತ್ಮನನ್ನು ಅಂದರೆ ಸ್ವಸ್ಥ ಮನಸ್ಸಿನ ಆತ್ಮನನ್ನು ಪಡಕೊಳ್ಳುತ್ತೇವೆ.

ಪ್ರಸ್ತುತ ಜೀವಿತವನ್ನು ಪವಿತ್ರ ವಾಕ್ಯಗಳಲ್ಲಿ ಪ್ರಸ್ತುತಿಪಡಿಸಿರುವ ಪವಿತ್ರಾತ್ಮನ ದೃಷ್ಟಿಕೋನದಿಂದ ವೀಕ್ಷಿಸುವಾಗ, ಆ ಬಹುಮಾನವನ್ನು ನೋಡುವ ಮತ್ತು 'ಕರೆ'ಯನ್ನು ಕೇಳಿಸಿಕೊಳ್ಳುವ ಎಲ್ಲರಿಗೂ ಇದೊಂದು ವಿದ್ಯಾಭ್ಯಾಸದ ಕಾಲ, ಭವಿಷ್ಯತ್ ಜೀವಿತಕ್ಕಾಗಿ ಮಾಡುವ ಸಿದ್ಧತೆ ಎಂದು ತೋರಿಬರುತ್ತದೆ. ಆದಾಗ್ಯೂ, ಯಾರ ಕಣ್ಣುಗಳು ತೆರೆಯಲ್ಪಟ್ಟಿವೆಯೋ ಮತ್ತು ಯಾರು ಒಳ ಕಣ್ಣುಗಳಿಂದ ನೋಡಬಲ್ಲರೋ ಅವರುಗಳು ಮಾತ್ರವೇ ಬಹಳ ಮಂದಿಯ ಕ್ರಮವು ಎಷ್ಟು ಅವಿವೇಕತೆಯಿಂದ ಕೂಡಿದೆ ಎಂಬುದನ್ನು ಅರಿತುಕೊಳ್ಳುತ್ತಾರೆ ಮತ್ತು ಅಂಥವರು ಇದುವರೆಗೆ ತಮ್ಮ ಸ್ವಂತ ಸ್ವಾರ್ಥಮಯ ಒಲವುಗಳನ್ನು ನಿಗ್ರಹಿಸಿಕೊಳ್ಳದೇ, ತಮ್ಮ ಪತನ ಸ್ವಭಾವದಲ್ಲಿದ್ದ ಶ್ರೀಮಂತವಾದ ಮತ್ತು ಹೆಚ್ಚು ಸತ್ಯವಾದ ಸಂಗತಿಗಳನ್ನು ಪುನಃ ಬೆಳಿಸಿಕೊಳ್ಳುವಲ್ಲಿ ಅವುಗಳಿಂದ ಅನೇಕ ಸಂಧರ್ಭಗಳಲ್ಲಿ ತಮ್ಮ ಗುಣಲಕ್ಷಣಗಳನ್ನು ಕೆಡಿಸಿಕೊಂಡವರಾಗಿ ತಾವು ಹುಟ್ಟಿದಲ್ಲಿದ್ದುದಕ್ಕಿಂತ ಬಲಹೀನವಾದ ಗುಣಲಕ್ಷಣಗಳೊಂದಿಗೆ ಈ ಲೋಕವನ್ನು ಮರಣದಲ್ಲಿ ಬಿಡುವವರಾಗಿದ್ದರೆ. ಇದು ಹಲವೊಮ್ಮೆ ಬಲಹೀನತೆಯ ಪರಭಾರೆಯ ಪೂರ್ವಾರ್ಜಿತ ಆಸ್ತಿಯಾಗಿ ಕಂಡುಬಂದು ಅವರ ಸಂತಾನದವರ ಮೇಲೂ ಬರಬಹುದಾಗಿದೆ.

ಮತ್ತೊಂದೆಡೆಯಲ್ಲಿ, ದೇವರ ವಾಕ್ಯವು ಮತ್ತು ಆ ವಾಕ್ಯದ ಪವಿತ್ರಾತ್ಮವು ಈ ಲೋಕದ ಸಂಪತ್ತಿಗಾಗಿರುವ ನಮ್ಮ ಆಕಾಂಕ್ಷೆಯನ್ನು ತಡೆಹಿಡಿಯುತ್ತದೆ ಮತ್ತು **"ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ"** (1 ತಿಮೋ. 6:10) ಎಂದು ನಮಗೆ ದೃಢಪಡಿಸುವುದರಿಂದ ಅವು ನಮ್ಮನ್ನು ವಿರುದ್ಧವಾದ ಸೋಮಾರಿತನ, ಮೈಗಳ್ಳತನ ಇವುಗಳ ಅತಿರೇಕದಿಂದಲೂ ರಕ್ಷಿಸುತ್ತವೆ ಮತ್ತು ಪ್ರತಿಯೊಬ್ಬರೂ ಎಲ್ಲರ ದೃಷ್ಟಿಯಲ್ಲಿ ಪ್ರಾಮಾಣಿಕವಾಗಿರುವ ಸಂಗತಿಗಳನ್ನು ಮಾತ್ರವೇ ಮುಖ್ಯವಾಗಿ ತನ್ನ ಮನೆಯವರ ಅಗತ್ಯತೆಗಳಿಗಾಗಿ ನೆರವೇರಿಸಬೇಕೆಂದು ಬೋಧಿಸುತ್ತವೆ. ಅವು ನಮ್ಮನ್ನು **"ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆಯನ್ನು ಮಾಡುವವರಾಗಿರ್ರಿ"** (ರೋಮಾ. 12:11) ಎಂದು ಎಚ್ಚರಿಸುತ್ತವೆ. ಈ ರೀತಿಯಲ್ಲಿ ದೇವರ ಆತ್ಮನನ್ನು ಹೊಂದಿಕೊಂಡಿರುವವರು ಆಲಸ್ಯವಾಗಿರದಂತೆ, ಯಾವುದೇ ನಿಜವಾದ ಯೋಗ್ಯತೆ ಇಲ್ಲದ ಗೊಬ್ಬರ ಕೂಡಿಸಿಕೊಳ್ಳುವುದರಲ್ಲಿ ತಮ್ಮ ಜೀವನವನ್ನು ವ್ಯರ್ಥಗೊಳಿಸುವ ಇತರರಿಂದ ನಮ್ಮನ್ನು ಜಾಗರೂಕಗೊಳಿಸುತ್ತದೆ; ಅವರುಗಳಿಗೆ ಆಲಸ್ಯದ ಅದೃಢತೆಯ ಬಗ್ಗೆಯೂ ಜಾಗರೂಕರನ್ನಾಗಿಸುತ್ತದೆ ಮತ್ತು ಮಾನವ ಜನಾಂಗಕ್ಕೆ ಉಪಯೋಗಕಾರಿಯಾದ ಎಲ್ಲಾ ಒಳ್ಳೆಯ ಸೇವೆಗಳಲ್ಲಿ ಉತ್ಸಾಹಶಾಲಿಗಳಾಗಿರುವಂತೆ ಬೋಧಿಸುತ್ತವೆ. ಇಂಥಾಃ ಸೇವೆಗಳಿಗೆ ದೈವಿಕ ಅನುಮತಿ ದೊರೆಯುತ್ತದೆ ಮತ್ತು ಇವು **"ಕರ್ತನಿಗೆ ಮಾಡಿದ ಸೇವೆ"** ಎಂಬುದಾಗಿ ಅಂಗೀಕೃತವಾಗುತ್ತವೆ ಮತ್ತು ಇವುಗಳಿಗೆ ನಿತ್ಯನಿರಂತರ ಜೀವಿತದಲ್ಲಿ ವಿಫುಲವಾದ ಬಹುಮಾನಗಳು ದೊರೆಯುತ್ತವೆ.

ಸ್ವಸ್ಥ ಮನಸ್ಸಿನ ಆತ್ಮವು ಪ್ರಸ್ತುತ ಜೀವನಾವಕಾಶಗಳಲ್ಲಿ ಗುಣಲಕ್ಷಣಗಳ ಶ್ರೀಮಂತಿಕೆಯನ್ನು, ಕೃಪೆಯ ಸಿರಿವಂತಿಕೆಯನ್ನು ಕಾಣುತ್ತದೆ ಮತ್ತು ತುಕ್ಕುಹಿಡಿಯದ, ಸವೆದುಹೋಗದ, ನಿತ್ಯಸಂತೋಷವನ್ನುಂಟುಮಾಡುವ ನಿಧಿಯನ್ನು ಗಳಿಸಿಕೊಡುತ್ತದೆ. ದೃಢವಾದ ಆತ್ಮನು ನಾವು ಮುಂದೆ ಸುಖವಾಗಿರುವುದಕ್ಕಾಗಿ ಈಗಿನ ಜೀವನವನ್ನು

ನಿರ್ಲಕ್ಷಿಸಬೇಕೆಂದು ಹೇಳುವುದಿಲ್ಲ. ಬದಲಾಗಿ ಮುಂದಿನ ದಿನಗಳನ್ನು ನೆನಪಿನಲ್ಲಿಟ್ಟುಕೊಂಡು ಈಗಿನ ಜೀವನವನ್ನು ವಿವೇಕದಿಂದ ಜೀವಿಸುವಂತೆ ಹೇಳುತ್ತದೆ.

ಸ್ವಸ್ಥವಾದ ಮನಸ್ಸಿನ ಆತ್ಮನು ತನ್ನ ಗುಣಲಕ್ಷಣಗಳನ್ನು ತನ್ನೆಲ್ಲಾ ಒಳ್ಳೆಯ ನೆಲೆಯಲ್ಲಿಯೂ ವ್ಯಾಪಿಸುತ್ತದೆ ಮತ್ತು ಆಳವಾಗಿರಿಸುತ್ತದೆ. ಅದನ್ನು ಹೊಂದಿದವರು ಸರಿಯಾಗಿ ಅವಲೋಕಿಸುವಂತೆ ಸಹಾಯಮಾಡುವುದು ಮಾತ್ರವಲ್ಲ, ಪತನದ ಹಾದಿಯಲ್ಲಿರುವ ಸಂಗಡಿಗರ ಬಗ್ಗೆಯೂ ಒಳ್ಳೆಯ ರೀತಿಯಲ್ಲಿ ಅವಲೋಕಿಸುವಂತೆ ಮಾಡುತ್ತದೆ ಮತ್ತು ಆತನ ಅನುಕಂಪವನ್ನು ವಿಸ್ತರಿಸುತ್ತದೆ. ಆತನು ಪತನದ ಮೂಲಕವಾಗಿ ಉಂಟಾಗಿರುವ ತನ್ನ ಸ್ವಂತ ಮನಸ್ಸು ಮತ್ತು ದೇಹದ ಹಾನಿಗಳನ್ನು ಮತ್ತು ತನ್ನ ಸ್ವಂತಕ್ಕೆ ಅಗತ್ಯವಾದ ಕರುಣೆ, ಸಹಾಯಕವಾದ ತಿದ್ದುಪಡಿ ಇವುಗಳನ್ನು, ಮತ್ತು ಅದೇ ರೀತಿಯಾಗಿ ಇಡೀ ಮಾನವಜಾತಿಯ ಅವ್ಯವಸ್ಥೆಯನ್ನು, ಸರ್ವಸಾಮಾನ್ಯವಾದ ಕರುಣೆಯ ಅಗತ್ಯತೆ ಮತ್ತು ತಿದ್ದುಪಡಿಗೆ ಸಹಾಯ ಇವುಗಳನ್ನು ಗ್ರಹಿಸಿಕೊಳ್ಳುತ್ತಾನೆ. ಆತನು ತನ್ನ ಮನಸ್ಸಿನ ಕೊರತೆಗಳನ್ನು ಮತ್ತು ಅಸಮಾನತೆಗಳನ್ನು ಸರಿಪಡಿಸಿಕೊಳ್ಳಲು ಕಲಿಯುವಾಗ, ಇಂಥಾಃ ಕ್ರಮಬದ್ಧವಾದ ತತ್ವಗಳೂ, ಸ್ವಸ್ಥವಾದ ಮನಸ್ಸಿನ ಆತ್ಮ ಇವುಗಳಿಲ್ಲದ ಇತರಿಗಾಗಿ, ಮತ್ತು ಅವರುಗಳು ವಿರೋಧಿಯ ವಿರೋಧದ ಕಾರಣ 'ಈ ಲೋಕದ ದೇವರು' ಇವುಗಳನ್ನು ಹೊಂದಿಕೊಳ್ಳಲು ಅಡ್ಡಿಯಾಗುತ್ತಿರುವುದಕ್ಕಾಗಿ ಹೆಚ್ಚಾಗಿ ಅನುಕಂಪಿಸುತ್ತಾನೆ. – **"ಇವರಲ್ಲಿ ದೇವರಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗ ಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು"** – 2 ಕೊರಿಂಥ 4:4.

"ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಯನ್ನಾಗಿ" ಪಡಕೊಂಡ ಪವಿತ್ರಾತ್ಮನು ಆತನನ್ನು ವೃದ್ಧಿಪಡಿಸಿಕೊಳ್ಳುವ ಅನುಪಾತಕ್ಕೆ ಅನುಗುಣವಾಗಿ, ಅದರ ಕಾರ್ಯಾಚರಣೆಯಿಂದಾಗಿ ಕ್ರಮೇಣವಾಗಿ ಹೆಚ್ಚು ತಾಳ್ಮೆಯುಳ್ಳವನು, ಹೆಚ್ಚು ಸಹಾನುಭೂತಿಯುಳ್ಳವನು, ಹೆಚ್ಚು ಉದಾರಿಯೂ, ಹೆಚ್ಚು ಪ್ರೀತಿಯುಳ್ಳವನೂ – ಹೆಚ್ಚಾಗಿ ದೇವರಂತೆಯೂ ಆಗುತ್ತಾನೆ. ಗುಣಲಕ್ಷಣದ ಈ ಔದಾರ್ಯಗಳು ಆತನ ಬಾಹ್ಯ ಚಟುವಟಿಕೆಗಳ ಮೇಲೆ ಮಾತ್ರವೇ ಪರಿಣಾಮಮಾಡುವುದಲ್ಲ, ಆತನ ಮಾತುಗಳ ಮತ್ತು ಆಲೋಚನೆಗಳ ಮೇಲೆಯೂ ಪರಿಣಾಮ ಗಳನ್ನುಂಟುಮಾಡುತ್ತವೆ. ಪವಿತ್ರಾತ್ಮನು ಆತನಲ್ಲಿ ಅಗೌರವವಾದ ಮತ್ತು ಅಪ್ರಮಾಣಿಕವಾದ ಕಾರ್ಯಗಳನ್ನು ನಿರಾಕರಿಸುವ ಅನುಪಾತದಲ್ಲಿಯೇ ಅದು ಆತನ ಸ್ನೇಹಿತನ ಹಾಗೂ ನೆರೆಯವನ ಅಥವಾ ವೈರಿಯ ಮಾತಿನ ವಿಷಯದಲ್ಲಿಯೂ ಅನುಮೋದಿಸದಿರುತ್ತದೆ. ಅದೇ ರೀತಿಯಲ್ಲಿ ಇವರಲ್ಲಿ ಯಾರಿಗಾದರೂ ಉಂಟಾಗ ಬಹುದಾದ ಸಣ್ಣದೊಂದು ಅನ್ಯಾಯುವನ್ನೂ, ನಿಷ್ಕರುಣೆಯನ್ನು ಸಹಾ ಅದು ನಿರುತ್ಸಾಹಗೊಳಿಸುತ್ತದೆ.

ಆದುದರಿಂದ, ಸ್ವಸ್ಥ ಮನಸ್ಸಿನ ಆತ್ಮವು ಕ್ರಮೇಣವಾಗಿ ಆದರೆ ನಿಶ್ಚಿತವಾಗಿ ಪತಿಯನ್ನು ಉತ್ತಮ ಪತಿಯನ್ನಾಗಿ ತಂದೆಯನ್ನು ಉತ್ತಮ ತಂದೆಯನ್ನಾಗಿ, ಮಗನನ್ನು ಉತ್ತಮ ಮಗನನ್ನಾಗಿ, ಪತ್ನಿಯನ್ನು ಉತ್ತಮ ಪತ್ನಿಯನ್ನಾಗಿ, ತಾಯಿಯನ್ನು ಉತ್ತಮ ತಾಯಿಯನ್ನಾಗಿ, ಮಗಳನ್ನು ಉತ್ತಮ ಮಗಳನ್ನಾಗಿ ಮಾಡುತ್ತದೆ. ಯಾಕೆಂದರೆ, ಅಲೋಚನೆಯ, ಮಾತಿನ ಮತ್ತು ನಡತೆಯ ತಳಹದಿಯು ಸ್ವಾರ್ಥತೆಯನ್ನು ಬಿಟ್ಟು ಪ್ರೀತಿಗೆ ಮಾರ್ಪಡಿಸುತ್ತದೆ. ಸ್ವಸ್ಥ ಮನಸ್ಸಿನ ಆತ್ಮ ಅಥವಾ ಪವಿತ್ರಾತ್ಮ, ಪ್ರೀತಿಯ ಆತ್ಮವನ್ನು ಆತನು ಪಡಕೊಂಡಾಗಿಲಿಂದಲೇ ಆತನು ಸಮಕಟ್ಟಿನಲ್ಲಿದ್ದು, ತನ್ನ ಸ್ವಂತ ಹಕ್ಕುಗಳಲ್ಲಿ, ಸೌಕರ್ಯಗಳಲ್ಲಿ, ಆಯ್ಕೆಗಳಲ್ಲಿ ಕಡಿಮೆಯಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಾನೆ ಹಾಗೂ ಇತರರ ಹಕ್ಕುಗಳು, ಭಾವನೆಗಳು ಮತ್ತು ಆಯ್ಕೆಗಳ ವಿಷಯದಲ್ಲಿ ಹೆಚ್ಚು ಉದಾರತೆಯನ್ನು ತೋರುತ್ತಾನೆ. ಸಹಜವಾಗಿ ದೇವರ ಚಿತ್ತಕ್ಕೆ ಪ್ರಪ್ರಥಮ ಸ್ಥಾನ, ದೇವರನ್ನು ಸಂಪ್ರೀತಿಗೊಳಿಸಿದ ನಂತರವೇ ಆತನು ತನ್ನ ಸಂಪರ್ಕಕ್ಕೆ ಬರುವ, ವಿಶೇಷವಾಗಿ ತನ್ನ ಸ್ವಂತ ಕುಟುಂಬದವರಾದ ಇತರರನ್ನು ಸಂಪ್ರೀತಿ ಗೊಳಿಸುವುದರಲ್ಲಿ ಸಂತೋಷ ಪಡೆಯುತ್ತಾನೆ. ದೇವರ ಸೇವೆಮಾಡುವ ಮತ್ತು ಆತನನ್ನು ಪ್ರಥಮವಾಗಿ ನಂತರದಲ್ಲಿ ಕರ್ತನ ಕುಟುಂಬದವರನ್ನು, ಕಡೆಗೆ ಅವಕಾಶ ದೊರೆತಂತೆ ಎಲ್ಲಾ ಜನರಿಗೂ ಸಂಪ್ರೀತಿಗೊಳಿಸುವ ಸಾಮರಸ್ಯದಲ್ಲಿ ಆತನ ಆಲೋಚನೆಗಳು ಕಾರ್ಯಗತಗೊಳ್ಳುತ್ತವೆ, ಆತನ ಮಾತುಗಳು ನಿರ್ದೇಶನ ಹೊಂದುತ್ತವೆ ಮತ್ತು ಮಿತಿಗೊಳ್ಳುತ್ತವೆ ಮತ್ತು ಆತನ ಗುಣಲಕ್ಷಣಗಳು ತಾನಾಗಿಯೇ ರೂಪಗೊಳ್ಳುತ್ತವೆ.

ಆದುದರಿಂದ, ಸ್ವಸ್ಥವಾದ ಮನಸ್ಸಿನ ಆತ್ಮವನ್ನು ಪಡಕೊಂಡ ಎಲ್ಲಾ ಸ್ತ್ರೀ ಮತ್ತು ಪುರುಷರು ಉತ್ತಮ ಪತಿ, ಪತ್ನಿ, ತಂದೆ, ತಾಯಿ, ಸಹೋದರ ಸಹೋದರಿಯರು ಪ್ರತಿಯೊಂದು ನಿರ್ದಿಷ್ಟ ಸಂದರ್ಭದಲ್ಲಿಯೂ ಆಗುವಂತೆ ಅನುಸರಿಸುವುದಿಲ್ಲ. ಯಾಕೆಂದರೆ, ನಾವೀಗಾಗಲೇ ಸಲಹೆ ನೀಡಿರುವಂತೆ, ಕ್ರಿಸ್ತನ ಸುವಾರ್ತೆಯ ಗುರಿಯು ನಾಗರೀಕ ಪ್ರಪಂಚದ ಮೇಲೆ ಮಾಡಿದ ಪರಿಣಾಮದಲ್ಲಿ ಪ್ರಪಂಚದ ನಿಕೃಷ್ಟರನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ ಮತ್ತು ಅವರು ಕರ್ತನಿಗೆ ಮಾಡಿಕೊಂಡ ಪ್ರತಿಷ್ಠೆಯ ಅನುಪಾತಕ್ಕೆ ಸರಿಯಾಗಿ ಅವರನ್ನು ಉದ್ಧರಿಸುತ್ತವೆ ಮತ್ತು ಅವರುಗಳು ದೃಢವಾದ ಮನಸ್ಸಿನ ಆತ್ಮನನ್ನು ಹೊಂದಿಕೊಳ್ಳುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ ಉತ್ತಮ ಹುಟ್ಟಿನ, ಮೇಲ್ಮಟ್ಟದಲ್ಲಿ ಜನಿಸಿದ ಕೆಲವರು ಸ್ವಪ್ರತಿಷ್ಠೆಯ ಕಡೆಗೆ ಹೆಚ್ಚು ವಾಲುತ್ತರೆ ಮತ್ತು ದೇವರು ನೀಡುವ ಸಹಾಯಗಳನ್ನು ನಿರಾಕರಿಸುತ್ತಾರೆ. ಇವರುಗಳು ತಾವು ಕುಲೀನತೆಯಲ್ಲಿ ಜನಿಸಿದ ಕಾರಣ ಕುಲೀನ ಪತಿಗಳೂ, ಕುಲೀನ ಪತ್ನಿಯರು, ಕುಲೀನ ಮಕ್ಕಳೂ ಆಗಿದ್ದಿರಬಹುದು ಮತ್ತು ತಮ್ಮ ಕ್ರೈಸ್ತ ತಂದೆತಾಯಿಗಳ ಮೂಲಕ ಉತ್ತಮ ಸಮತೋಲನವುಳ್ಳ ಮನಸ್ಸು ಮತ್ತು ಉತ್ತಮ ವಿವೇಕಗಳನ್ನು ಪಿತ್ರಾರ್ಜಿತವಾಗಿ ಪಡಕೊಂಡಿರಬಹುದು. ಆದರೆ ಅಂಥವರು ರಕ್ಷಕನನ್ನು ಮತ್ತು ನೂತನ ಮನಸ್ಸಿನ ಕೊಡುಗೆಗಳನ್ನು ಅಂಗೀಕರಿಸಿಕೊಳ್ಳದ ಹೊರತು ಅವರುಗಳು ಅವನತಿ ಹೊಂದುವುದು ನಿಶ್ಚಿತ ಮತ್ತು ಅವರ ಕರುಣೆ, ದಯಾಪರತೆ ಮುಂತಾದವುಗಳು ಬಾಹ್ಯರೂಪದವುಗಳಾಗಿ ಬಿಡುತ್ತವೆ ಮತ್ತು ಅವರ ಒಳಗಿರುವ ಸ್ವಾರ್ಥತೆಯನ್ನು ಮುಚ್ಚಿಕೊಂಡಿರುತ್ತದೆ. ಬಲುಬೇಗ ಇಲ್ಲವೇ ತಡವಾಗಿ ಈ ಸ್ವಾರ್ಥತೆಯು ಅವರ ಪೀಳಿಗೆಯವರಲ್ಲಿ ಬೆಳೆದು ಅವರನ್ನು ಕೆಳಮಟ್ಟಕ್ಕೆ ತರಬಹುದಾಗಿದೆ.

ನಾವಿಲ್ಲಿ ಒತ್ತಿಹೇಳ ಬಯಸುವ ಆಲೋಚನೆ ಏನೆಂದರೆ, ಯಾವುದೇ ಮಾನಸಿಕ ಮಟ್ಟದ ವರ್ಣನೆಗಳಲ್ಲಿ, ಅಮರತ್ವದಲ್ಲಿ ಅಥವಾ ಅವಿವೇಕತನದಲ್ಲಿ ದೇವರ ಸತ್ಯ ಮತ್ತು ಕೃಪೆಯು ಒಬ್ಬ ಪುರುಷ ಅಥವಾ ಸ್ತ್ರೀಯನ್ನು ತಲುಪಿ ಅದು ಅವರನ್ನು ಉದ್ಧರಿಸಿ ಶ್ರೇಷ್ಠರನ್ನಾಗಿ, ಹೆಚ್ಚು ಪವಿತ್ರರನ್ನಾಗಿ, ಹೆಚ್ಚು ಕರುಣೆಯುಳ್ಳವರನ್ನಾಗಿ, ಹೆಚ್ಚು ಸಾಧುಸ್ವಭಾವದವರನ್ನಾಗಿ, ಬೇರೆಯವರ ವಿಷಯದಲ್ಲಿ ಹೆಚ್ಚು ವಿವೇಚನೆಯುಳ್ಳವರಾಗಿ ಮಾಡುತ್ತದೆ. ಅವರು ತಾವು ಪಡೆದ ನೂತನ ಮನಸ್ಸು, ಸ್ವಸ್ಥ ಮನಸ್ಸಿನ ಆತ್ಮ ಇದರ ಅನುಪಾತಕ್ಕೆ ಅನುಗುಣವಾಗಿ ಮಾಡುತ್ತದೆ.

ಮಾನವನ ಮನಸ್ಸಿನ ಸ್ವಸ್ಥತೆಯಿಲ್ಲದಿರುವಿಕೆಯು ಸಾಮಾನ್ಯವಾಗಿ ಮಾನವ ಜನಾಂಗದ ಅಜಾಗರೂಕತೆಯ ಸಂತಾನಾಭಿವೃದ್ಧಿಯ ಹೆಚ್ಚಳದ ದೃಷ್ಟಾಂತದ ಮೂಲಕ ವಿವರಿಸಲ್ಪಡುತ್ತದೆ. ಇದು ಯಾವುದೇ ಆರೋಗ್ಯ ನಿಯಮಗಳಿಲ್ಲದೇ ಹೆಚ್ಚುತ್ತಾ ಇದೆ ಮತ್ತು ಬಹುಮಟ್ಟಿಗೆ ಹುಟ್ಟಿದ ಮಗುವಿಗೆ ಸಾಕಷ್ಟು ಪೋಷಣಾಧಾರವಿಲ್ಲದೆ ಸಾಗುತ್ತಾ ಇದೆ ಮತ್ತು ಇದರಲ್ಲಿ ಹಸುಗಳು, ಕುದುರೆಗಳು, ಕುರಿಗಳು, ನಾಯಿಗಳು ಇತ್ಯಾದಿ ಕೆಳಮಟ್ಟದ ಪ್ರಾಣಿಗಳಲ್ಲಿ ಪೋಷಣೆಯಲ್ಲಿ ಕಂಡುಬರುವ ಪ್ರಾಕೃತಿಕ ನಿಯಮಗಳ ಉಲ್ಲಂಘನೆಯೂ ಇದೆ. **"ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬುದನ್ನು ಜ್ಞಾಪಕ ಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನಮಾಡಿರಿ"** (1 ಪೇತ್ರ 3:7) ಎಂದು ಹೇಳುವುದರ ಮೂಲಕ ಅಪೋಸ್ತಲನು ಮಾನವರು ತಮಗೆ ನೀಡಲ್ಪಟ್ಟಿರುವ ಜನ್ಮಕೊಡುವ ಅತ್ಯುತ್ತಮವಾದ ಪ್ರಾಕೃತಿಕ ಶಕ್ತಿಯನ್ನು ವಿಶ್ವಾಸಿಗಳು ಸ್ವಸ್ಥ ಮನಸ್ಸಿನಿಂದ ಚಲಾಯಿಸಬೇಕೆಂದು ಹೇಳಿರುವುದರಲ್ಲಿ ಆಶ್ಚರ್ಯವೇನಿಲ್ಲ. ಈ ಬುದ್ಧಿಮಾತುಗಳನ್ನು ಅನುಸರಿಸಿದಲ್ಲಿ, ಸ್ವಸ್ಥ ಮನಸ್ಸಿನಿಂದ ಆತ್ಮನು ಪ್ರಭಲವಾಗಿರುವಲ್ಲಿ, ನಾಜೂಕಾಗಿಯೂ ಮತ್ತು ಹೆಚ್ಚು ಪ್ರಯಾಸ ಪಡುವವರಾಗಿಯೂ ಇರುವ ಹೆಂಡತಿಯರಿಗೆ ಅವರನ್ನು ನಿಜವಾಗಿಯೂ ಪ್ರೀತಿಸುವ ಮತ್ತು ಅವರೊಡನೆ ಬುದ್ಧಿಪೂರ್ವಕವಾಗಿ ವ್ಯವಹರಿಸುವ ಗಂಡಂದರಿಂದ ಬಹಳಷ್ಟು ಗೌರವ ಪರಿಗಣನೆ ದೊರೆಯುತ್ತದೆ.

ಆದರೆ ಕರ್ತನ ದಾಸ ದಾಸಿಯರು ಮಾತ್ರವೇ ಈ ಪವಿತ್ರ ಆತ್ಮನನ್ನು – ಸ್ವಸ್ಥ ಮನಸ್ಸಿನ ಆತ್ಮನನ್ನು ಇನ್ನೂ ಹೊಂದಿರುತ್ತಾರೆ. ಈ ದಾಸ ದಾಸಿಯರ ಸೇವೆಯ ಮೂಲಕವಾಗಿ ಮಹಿಮೆ ಹೊಂದಿ, ಅರಸನ ಮಹಿಮೆಯಿಂದ ಬಲಗೊಂಡವರಾಗಿ ಅವರ ಮೂಲಕ ಸಮಸ್ತ ಲೋಕವು ಆಶೀರ್ವಾದ ಹೊಂದಿಕೊಂಡು, ಕರ್ತನು ಎಲ್ಲಾ ಜನರ ಮೇಲೆ, ಎಲ್ಲಾ ಮಾಂಸಧಾರಿಗಳ ಮೇಲೆ ತನ್ನ ಆತ್ಮನನ್ನು ಆಶೀರ್ವಾದಕವಾಗಿ ಸುರಿಯುವ ಕಾಲವು ಹತ್ತಿರವಾಗುತ್ತಿದೆ, ಇದಕ್ಕಾಗಿ ದೇವರಿಗೆ ಸ್ತೋತ್ರ.

* * * * * *